# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 76 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 17.09.2024 • ಮಂಗಳವಾರ • ಪುಟ:04 • ಬೆಲೆ:2

Volume:02 • Issue: 76 • PRGI No:KARKAN/2023/88055 • VIJAYANAGARA • 17.09.2024 • Tuesday • Page:04 • Rs:2



ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?

HAMPI TIMES VIJAYANAGARA

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಚಿಕ್ಕ ಮೊತ್ತ ದೊಡ್ಡ ಜಾಹೀರಾತು

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ ದಿನಪತ್ರಿಕೆ

85 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ

ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ

Print & Digital News Paper

ಹಂಪಿ ಟೈಮ್ಸ್ ಇ-ಪೇಪರ್

ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


# ಶಿಕ್ಷಕರ ಕೈಸೇರದ ಹರ್ಷದ ವೇತನ

## ಮೇಷ್ಟ್ರುಗಳ ಸ್ಯಾಲರಿ ಪಾವತಿಗೆ ಆಯುಕ್ತರು, ಜಿಲ್ಲಾ ಉಪನಿರ್ದೇಶಕರಿಂದ ಮೇ ತಿಂಗಳಲ್ಲೆ ಆದೇಶ

## 10 ತಿಂಗಳ ಸಂಬಳಕ್ಕಾಗಿ ಕಾಯುತ್ತಿರುವ 6 ರಿಂದ 8ನೇ ತರಗತಿಗೆ ನೇಮಕವಾದ ಹೊಸ ಟೀಚರ್ಸ್

## ಕುಟುಂಬ ಪೋಷಣೆಗೆ ಪರದಾಟ | ಸಾಲದ ಸುಳಿಗೆ, ಮಾನಸಿಕ ಒತ್ತಡಕ್ಕೆ ಸಿಲುಕಿದ ಗುರುಗಳು

■ **ಹಂಪಿ ಟೈಮ್ಸ್ ಹೊಸಪೇಟೆ**

ಅರ್ಹತೆ ಆಧರಿಸಿ ಹೊಸದಾಗಿ 6 ರಿಂದ 8ನೇ ತರಗತಿಗೆ ನೇಮಕಗೊಂಡ ಅನೇಕ ಶಿಕ್ಷಕರ ಪೈಕಿ 20ಕ್ಕೂ ಅಧಿಕ ಶಿಕ್ಷಕರು ಹತ್ತು ತಿಂಗಳಿಂದ ಬಾರದ ವೇತನಕ್ಕಾಗಿ ನಿತ್ಯ ಬ್ಯಾಂಕ್ ಬ್ಯಾಲೆನ್ಸ್ ಚೆಕ್‌ಮಾಡಿಕೊಳ್ಳುವಂತಾಗಿದೆ. ವೇತನ ಬಾರದ್ದರಿಂದ ಪೋಷಕರ ಆರೋಗ್ಯ, ನಿತ್ಯದ ಜೀವನ ನಿರ್ವಹಣೆಗೆ ಸಾಲದ ಸುಳಿಗೆ ಸಿಲುಕಿ ಮಾನಸಿಕ ಒತ್ತಡಕ್ಕೊಳಗಾಗುತ್ತಿದ್ದಾರೆ. ಹಗಲಿರುಳು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವ ಶಿಕ್ಷಕರ ಸಂಕಷ್ಟ ಕೇಳುವವರು ಇಲ್ಲವೇ? ಎನ್ನುವ ಪ್ರಶ್ನೆ ಜನಸಾಮಾನ್ಯರನ್ನೂ ಕಾಡುತ್ತಿದೆ.

ಆಧುನಿಕ ವೇಗದ ತಂತ್ರಜ್ಞಾನದ ನಡುವೆ ಮಾಹಿತಿ ಹಂಚಿಕೊಳ್ಳಲು ಹತ್ತಾರು ಅವಕಾಶಗಳಿದ್ದರೂ, ವಿಸಿ ಮೂಲಕ ಮೀಟಿಂಗ್‌ಗಳು ನಡೆಸಿ ಅನೇಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಾಗುತ್ತಿದ್ದರೂ, ಶಿಕ್ಷಣ ಇಲಾಖೆಯ ಅಧಿಕಾರಿಗಳು ತಾಂತ್ರಿಕ ಸಮಸ್ಯೆ ಎಂದೇಳುವ ನೆಪ ಸರಿಯೇ ಎಂಬ ಪ್ರಶ್ನೆ ಶಿಕ್ಷರಲ್ಲದೇ ಜನಸಾಮಾನ್ಯರನ್ನು ಕಾಡುತ್ತಿದೆ. ಶಿಕ್ಷಕರ ಬದುಕನ್ನು ಶಿಕ್ಷಣ ಇಲಾಖೆಯ ಮೇಲಾಧಿಕಾರಿಗಳೇ ಅರ್ಥೈಸಿಕೊಳ್ಳದಿರುವುದು ವಿಪರ್ಯಾಸ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 2022-23ನೇ ಸಾಲಿನಲ್ಲಿ 6 ರಿಂದ 8ನೇ ತರಗತಿಯಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಾತಿಯಾದ 56 ಶಿಕ್ಷಕರಿಗೆ ಪ್ರಥಮ ವೇತನ ಅರ್ಹತಾ ಪ್ರಮಾಣ ಪತ್ರ ದೊಂದಿಗೆ ಕರ್ತವ್ಯಕ್ಕೆ ಹಾಜರಾದ ದಿನದಿಂದ ಪರಿಷ್ಕೃತ ವೇತನ ಶ್ರೇಣಿಯನ್ನು ನೀಡುವಂತೆ 17 ಮೇ 2024 ರಂದು ಶಾಲಾ ಶಿಕ್ಷಣ ಆಯುಕ್ತರಾದ ಬಿ.ಬಿ.ಕಾವೇರಿ ಅವರು ಜಿಲ್ಲಾ



ಉಪನಿರ್ದೇಶಕರಿಗೆ ವೇತನ ಪಾವತಿಗೆ ಕ್ರಮವಹಿಸಲು ಲಿಖಿತವಾಗಿ ಸೂಚಿಸಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ ವಿಜಯನಗರ ಜಿಲ್ಲೆ ಉಪನಿರ್ದೇಶಕರು ಸಂಬಂಧಿಸಿದ ಹಗರಿಬೊಮ್ಮನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಗೆ 24 ಮೇ 2024ರಂದೇ ಲಿಖಿತ ನಿರ್ದೇಶನ ನೀಡಿದ್ದಾರೆ. ನೇಮಕಗೊಂಡ 56 ಶಿಕ್ಷಕರ ಪೈಕಿ ಅನೇಕರಿಗೆ ವೇತನ ಬಿಡುಗಡೆಗೊಳಿಸಲಾಗಿದೆ ಆದರೆ 20ಕ್ಕೂ ಅಧಿಕ ಶಿಕ್ಷಕರ ಖಾತೆಗೆ ಇನ್ನೂ ವೇತನ ಪಾವತಿಯಾಗದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿದ್ದು, ಶಿಕ್ಷಕರ ವಲಯದಲ್ಲಿ ಇದೀಗ ಚರ್ಚೆಗೆ ಗ್ರಾಸವಾಗಿದೆ.

**ಜೀವನ ನಿರ್ವಹಣೆಗೆ ಪರದಾಟ:**

ಆರ್ಥಿಕ ಸಂಕಷ್ಟದ ನಡುವೆ ಶಿಕ್ಷಣ ಪೂರೈಸಿ, ಅರ್ಹತೆ ಆಧಾರದ ಮೇಲೆ ಶಿಕ್ಷಕರಾಗಿ ಆಯ್ಕೆಗೊಂಡ ಶಿಕ್ಷಕರ ಕುಟುಂಬದಲ್ಲಿ ನೆಮ್ಮದಿಯ ನಿಟ್ಟುಸಿರಿನ ಬದಲಿಗೆ ಆರ್ಥಿಕ ಸಂಕಷ್ಟ ಮತ್ತಷ್ಟು ಎದುರಾಗಿದೆ. ಮೊದಲ ತಿಂಗಳು ವೇತನ ಬರುತ್ತದೆ ಎಂಬ ಕಾತುರದಿಂದ ಕ್ಯಾಲೆಂಡರ್ ತಿರುಗಿಸಿದ ಹೊಸ ಶಿಕ್ಷಕರಿಗೆ ವೇತನ ಪಾವತಿಗೆ ಅಗತ್ಯವಿರುವ ದಾಖಲೆ, ಮಾಹಿತಿ ಒದಗಿಸುವ ಸೂಚನೆಗಳೇ ಬಂದವೇ ಹೊರತು ಇದೂವರೆಗೂ ಅನೇಕರಿಗೆ ವೇತನ ಕೈಸೇರಲಿಲ್ಲ. ನವೆಂಬರ್ 2023 ರಿಂದ ಶಿಕ್ಷಕರು ಮಕ್ಕಳ ಉಜ್ವಲ ಭವಿಷ್ಯಕ್ಕೆ ತಮ್ಮನ್ನು ಬದುಕನ್ನೇ ಸವೆಸಿಕೊಳ್ಳುತ್ತಾ, ಕ್ಯಾಲೆಂಡರ್ ಹಾಳೆ ತಿರುಗಿಸುತ್ತಾ ಯಾರ ಮುಂದೆಯೂ ಹೇಳಿಕೊಳ್ಳಲಾಗದೆ ತಮ್ಮೊಳಗೆ ವೇದನೆ ಅನುಭವಿಸುತ್ತಿದ್ದಾರೆ. ಹೆತ್ತವರಿಗೆ ಮೊದಲ ವೇತನ ನೀಡಬೇಕೆಂಬ ಯುವ ಶಿಕ್ಷಕರ ಕನಸಿನ ಖುಷಿಯೂ ಇನ್ನೂ ನನಸಾಗಿಲ್ಲ. ಹೆತ್ತವರ ಆರೋಗ್ಯ, ಸಹೋದರ, ಸಹೋದರಿಯರ ಶೈಕ್ಷಣಿಕ ವೆಚ್ಚ, ಜೀವನ ನಿರ್ವಹಣೆಗೆ ಪರದಾಡುವಂತಾಗಿದೆ. ಇನ್ನೂ ಹೊಸದಾಗಿ ನೇಮಕಗೊಂಡ ಶಿಕ್ಷಕಿಯರ ಆರ್ಥಿಕ ಪರಿಸ್ಥಿಯತಿಯಂತು ಹೇಳತೀರದ್ದಾಗಿದೆ. ಹೊಸ ಶಿಕ್ಷಕರ ಆರ್ಥಿಕ ಸಂಕಷ್ಟವನ್ನು ನೋಡಲಾಗದ ಹಿರಿಯ ಶಿಕ್ಷಕರು ಅಯ್ಯೋ ಇದೆಂಥಾ ಸ್ಥಿತಿ ಇಲಾಖೆಗೆ ಎನ್ನುತ್ತಿದ್ದಾರೆ.

ಅಕ್ಕರೆಯಿಂದ ಮಕ್ಕಳನ್ನು ಸನ್ಮಾರ್ಗದತ್ತ ಕರೆದೊಯ್ಯುತ್ತಿರುವ ಶಿಕ್ಷಕರಿಗೆ ವೇತನ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಸಕಾಲದೊಳಗೆ ಒದಗಿಸಿದರೆ ಮಕ್ಕಳಲ್ಲಿ ಶೈಕ್ಷಣಿಕ ಪ್ರಗತಿ ಸಾಧಿಸಲು ಸಾಧ್ಯ ಎಂಬುದನ್ನು ಜನಪ್ರತಿನಿಧಿಗಳು, ಮೇಲಾಧಿಕಾರಿಗಳು ಅರಿಯಬೇಕು ಎನ್ನುತ್ತಾರೆ ಶಿಕ್ಷಣ ಪ್ರೇಮಿಗಳು. ಹಿರಿಯ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ಶಿಕ್ಷಕರ ಬ್ಯಾಂಕ್ ಖಾತೆಗೆ ವೇತನ ಪಾವತಿಯಾಗುವಂತೆ ಕ್ರಮವಹಿಸುವರೆ ಕಾದುನೋಡಬೇಕು.

> **ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 6ರಿಂದ 8ನೇ ತರಗತಿ ನೂತನವಾಗಿ ನೇಮಕಗೊಂಡ ಅನೇಕ ಶಿಕ್ಷಕರ ವೇತನ ಇನ್ನೂ ಆಗಿಲ್ಲ. ಈಗಾಗಲೇ ಅನೇಕ ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ನಿರ್ದೇಶಕರೊಂದಿಗೆ ಚರ್ಚಿಸಿದ್ದೇನೆ. ಆಧುನಿಕ ತಂತ್ರಜ್ಞಾನ ಕಾಲಘಟ್ಟದಲ್ಲೂ ತಾಂತ್ರಿಕ ಸಮಸ್ಯೆ ಹೇಳುವುದು ಸರಿಯಲ್ಲ. ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ, ಶಿಕ್ಷಕರಿಗೆ ನಿರಂತರವಾಗಿ ಪ್ರತಿ ತಿಂಗಳು ವೇತನ ನೀಡಬೇಕೆಂದು ಕೋರಿದ್ದೇವೆ. ತಡವಾದರೆ ಆಯುಕ್ತರ ಗಮನಕ್ಕೂ ತಂದು ಮುಂದಿನ ಹೋರಾಟಕ್ಕೆ ಸಜ್ಜಾಗುತ್ತೇವೆ.**
>
> – ಪಿ.ಮುರಳಿಧರ, ರಾಜ್ಯಧ್ಯಕ್ಷರು, ಕರ್ನಾಟಕ ರಾಜ್ಯ 6ರಿಂದ8 ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘ. ಬೆಂಗಳೂರು.

> **ಕೆಜಿಐಡಿ, ಎಚ್‌ಆರ್‌ಎಂಎಸ್‌ಗೆ ಶಿಕ್ಷಕರು ಅಗತ್ಯ ಮಾಹಿತಿ ಒದಗಿಸುವಲ್ಲಿ ಮತ್ತು ತಾಂತ್ರಿಕ ತೊಂದರೆಯಿಂದಾಗಿ ಆರು ಶಿಕ್ಷಕರಿಗೆ ವೇತನ ಆಗಿಲ್ಲ. 48 ಶಿಕ್ಷಕರಿಗೆ ವೇತನ ಮಾಡಲಾಗಿದೆ. ಇನ್ನೆರೆಡು ದಿನಗಳಲ್ಲಿ ಇನ್ನುಳಿದವರಿಗೂ ವೇತನ ಪಾವತಿಗೆ ಕ್ರಮವಹಿಸಲಾಗುವುದು.**
>
> –ಮಲ್ಲೇಶ ಬೇವೂರು
> ಕ್ಷೇತ್ರ ಶಿಕ್ಷಣಾಧಿಕಾರಿ, ಹ.ಬೊ.ಹಳ್ಳಿ.


ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


## ಮೈಕ್ರೋ ನ್ಯೂಸ್

### ಆಡುತಾ ಬಂದ, ಬೇಡುತಾ ಬಂದ, ಮನೆ ಮನೆಗೆ ಜೋಕುಮಾರ ಸ್ವಾಮಿ.

**ಹಂಪಿ ಟೈಮ್ಸ್ ಕೊಟ್ಟೂರು**

ಅಡ್ಡಡ್ಡ ಮಳೆ ಬಂದು, ದೊಡ್ಡ ದೊಡ್ಡ ಕೆರೆ ತುಂಬಿ, ದೊಡ್ಡೆಮ್ಮಿ, ಗೊಡ್ಡೆಮಿ ಹೈನಾಗಿ ಜೋಕುಮಾರಗೆ ಎಣ್ಣೆ, ಬೆಣ್ಣೆ ಕೊಡಿರವ್ವ ಎಂದು ಮಹಿಳೆಯರು ಹಾಡುವ ಜನಪದ ಹಾಡು ಕ್ಷಣ ಹೊತ್ತು ಕೇಳುಗರನ್ನ ತನ್ನತ್ತ ಆಕರ್ಷಿಸುತ್ತೆ.

ಸೋಮವಾರ ಪಟ್ಟಣದಲ್ಲಿ ಜೋಕುಮಾರ ಸ್ವಾಮಿ ಹೊತ್ತು ಮನೆ ಮನೆಗೆ ಆಗಮಿಸಿದ ಕಸ್ತೂರಮ್ಮ, ಶಾರದಮ್ಮ, ರೇಣುಕಮ್ಮ, ಅಡಿವೆಮ್ಮ, ಜಯಮ್ಮ ಅವರು ಮನೆಯ ಮುಖ್ಯಸ್ಥೆ ಹಾಗೂ ಸೊಸೆಯರ ಹೆಸರಿನ ಮೇಲೆ ಪದ ಕಟ್ಟಿ ತಮ್ಮ ಗಾನಕಂಠದಿಂದ ಸುಶ್ರಾವ್ಯವಾಗಿ ಹಾಡಿ ಮನೆತನಕ್ಕೆ ಸಿರಿ ಬರಲಿ, ಕುಟುಂಬಕ್ಕೆ ಒಳಿತಾಗಲಿ ಎಂದು ಶುಭ ಹಾರೈಸಿದರು.

"ಮಡಿವಾಳ ಕೇರಿ ಹೊಕ್ಯಾನ, ಮುಡಿತುಂಬಾ ಹೂ ಮುಡಿದಾನ......"ಆಡುತಾ ಬಂದ ಜೋಕುಮಾರ, ಬೇಡುತಾ ಬಂದ ಜೋಕುಮಾರ, ಲೋಕವೆಲ್ಲ ಬೆಳಗಲಿ, ಆಕಳು ಹಾಲು ಕರೆಯಲಿ........ ಎಂದು ಜೋಕುಮಾರ ಸ್ವಾಮಿಯ ಕುರಿತು ಹಾಡಿದ ಹತ್ತಾರು ಜನಪದ ಹಾಡುಗಳು, ಕೇಳುಗರನ್ನು ಮತ್ತೊಮ್ಮೆ ಮೊಗದೊಮ್ಮೆ ಎಂಬಂತಿದ್ದವು.

ಈ ವೇಳೆ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಜೋಕುಮಾರ ಸ್ವಾಮಿ ಗಂಗಮತಾಸ್ಥರ ಆರಾಧ್ಯದೈವ, ಭಾದ್ರಪದ ಮಾಸದ ಅಷ್ಟಮಿಯ ದಿನದಂದು ಜೋಕುಮಾರ ಹುಟ್ಟುತ್ತಾನೆ, ಈ ವೇಳೆ 7 ದಿನಗಳ ಕಾಲ ಜೋಕುಮಾರ ಮೂರ್ತಿಯನ್ನು ಬುಟ್ಟಿಯಲ್ಲಿ ಇರಿಸಿಕೊಂಡು ಗಂಗಮತಾಸ್ಥರು ಮಳೆಗಾಗಿ, ನಾಡಿನ ಒಳಿತಿಗಾಗಿ ಮನೆ, ಮನೆಗೆ ಕಾಲ್ನಡಿಗೆಯಲ್ಲಿ ತೆರಳಿ ಆರಾಧ್ಯದೇವರು ಪ್ರಾರ್ಥನೆ ಹಾಡುತ್ತ ಆಚರಿಸುವ ಉತ್ತರ ಕರ್ನಾಟಕದ ವಿಶೇಷ ಹಬ್ಬ ಇದಾಗಿದೆ ಎಂದರು. >>4

# ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ರಚನೆಗೆ ಚರ್ಚೆ: ಸಿಎಂ



■ **ಹಂಪಿ ಟೈಮ್ಸ್ ಕಲಬುರಗಿ**

ಕಲ್ಯಾಣ ಕರ್ನಾಟಕದ ಭಾಗವಾದ ಕಲಬುರಗಿಯಲ್ಲಿ ಸೆ,17ರಂದು ಸಚಿವ ಸಂಪುಟ ಸಭೆ ನಡೆಸಲಾಗುತ್ತಿದ್ದು, ಈ ಭಾಗದ ಅಭಿವೃದ್ಧಿಗಾಗಿ ಪೂರಕ ಚರ್ಚೆ ಹಾಗೂ ತೀರ್ಮಾನಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸೋಮವಾರ ಕಲಬುರಗಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ರೂಪಿಸಲಾಗಿರುವ ಯೋಜನೆಗಳು ಹಾಗೂ ಇನ್ನಿತರ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಗುವುದು. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿನ ಜನರಿಗೆ ಉದ್ಯೋಗಾವಕಾಶಗಳ ಬಗ್ಗೆ ಹಾಗೂ ಪ್ರತ್ಯೇಕ ಸಚಿವಾಲಯ ರಚನೆ ಬಗ್ಗೆಯೂ ಚರ್ಚಿಸಲಾಗುವುದು. >>4

> **ನಾಗಮಂಗಲ ಪ್ರಕರಣ– ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಅಮಾನತ್ತು:** ಮಂಡ್ಯ ಜಿಲ್ಲೆಯ ನಾಗಮಂಗಲದ ಗಲಭೆ ಪ್ರಕರಣದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತಾ, ನಾಗಮಂಗಲ ಶಾಂತವಾಗಿದೆ. ಗಲಭೆ ಪ್ರಕರಣಕ್ಕೆ ಪೊಲೀಸರ ಕರ್ತವ್ಯ ವೈಫಲ್ಯವ ಕಾರಣವೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಸಂಬಂಧಪಟ್ಟ ಉಪಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇನ್ಸ್ ಪೆಕ್ಟರ್‌ನ್ನು ಅಮಾನತ್ತುಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಹಾನಿಗೊಳಗಾದ ಅಂಗಡಿ ಮುಂಗಟ್ಟು, ವಾಹನಗಳಿಗೆ ಪರಿಹಾರ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಸಿಎಂ ತಿಳಿಸಿದರು.

# ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಗ್ರಂಥಾಲಯ ಗರಡಿ ಮನೆಗಳಿ ದ್ದಂತೆ

## ತಹಶಿಲ್ದಾರ್ ಅಮರೇಶ್ ಜಿ.ಕೆ. ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು, ಗ್ರಂಥಾಲಯ ಗರಡಿ ಮನೆ ಇದ್ದಂತೆ, ಶ್ರದ್ಧೆಯಿಂದ ನಿತ್ಯ ಇಲ್ಲಿ ಅಭ್ಯಾಸ ಮಾಡಿದ್ದೇ ಆದರೆ ತಾವು ಬಯಸಿದ ಹುದ್ದೆ ನಿಮ್ಮದಾಗಲಿದೆ ಎಂದು ತಹಶಿಲ್ದಾರ ಅಮರೇಶ್ ಜಿ.ಕೆ. ಹೇಳಿದರು.

ಪಟ್ಟಣದ ಗೊರ್ಲಿ ಶರಣಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ಕೊಟ್ಟೂರಿನ ಸಾರ್ವಜನಿಕ ಗ್ರಂಥಾಲಯದಿಂದ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಪಠ್ಯದ ಜೊತೆಗೆ ಪಠ್ಯೇತರ ವಿಷಯಗಳನ್ನು ಹೆಚ್ಚೆಚ್ಚು ಓದಬೇಕು, ಹಾಗೆ ಹುದ್ದೆಗೆ ಅರ್ಜಿ ಸಲ್ಲಿಸಿದ ವೇಳೆ, ಹುದ್ದೆಗೆ ತಕ್ಕಂತೆ ಪಠ್ಯದ ವಿಷಯಗಳನ್ನು ಹೆಚ್ಚು ಅಭ್ಯಾಸ ಮಾಡಬೇಕು ಎಂದು ಹೇಳಿದರು.

ಪ್ರಾಚಾರ್ಯರು ಡಾ.ಜಿ.ಸೋಮಶೇಖರ್ ಮಾತನಾಡಿ, ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಯು ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ನೀಡಿ, ಓದುವ ಹವ್ಯಾಸ ಅಲ್ಲಿ ಬೆಳೆಯುತ್ತೆ, ಎಲ್ಲಾ ಸ್ಪರ್ಧಾತ್ಮಕ ಪುಸ್ತಕಗಳನ್ನು ಅಲ್ಲಿ ಓದಲು ನಿಮಗೆ ಸ್ವತಂತ್ರವಿದೆ ಎಂದು ಹೇಳಿದರು.

ಕೊಟ್ಟೂರು ಶಾಖಾ ಗ್ರಂಥಾಲಯ ಅಧಿಕಾರಿ ಮಲ್ಲಪ್ಪ ಗುಡ್ಲಾನೂರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಪ್ರತಿ ತಿಂಗಳ ಎರಡನೇ ಶನಿವಾರ ವಿಶೇಷ ಉಪನ್ಯಾಸವನ್ನು ವಿವಿಧ ವಿಷಯ ತಜ್ಞರಿಂದ ನೀಡುತ್ತಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೆ ರಾಜ್ಯದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಸ್ಪರ್ಧಾತ್ಮಕ ಪುಸ್ತಕಗಳು ಇಲ್ಲಿನ ಗ್ರಂಥಾಲಯದಲ್ಲಿ ದೊರೆಯುತ್ತವೆ ಎಂದು ತಿಳಿಸಿದರು.

ಕಾಲೇಜ್ ನ ಉಪನ್ಯಾಸಕರಾದ ಡಾ. ಜಗದೀಶ್ ಚಂದ್ರ ಬೋಸ್, ಎಚ್. ಎಂ ನಾಗಯ್ಯ ಮಾತನಾಡಿದರು. ಸಂಜನಾ ಮತ್ತು ಭಾವನಿ ಪ್ರಾರ್ಥಿಸಿದರು. ಭಾವನಿ ಸ್ವಾಗತಿಸಿದರು. ಯಶ್ವಂತ್. ಕೆ ನಿರೂಪಿಸಿ ವಂದಿಸಿದರು.

# ಸಂಭ್ರಮ ಸಡಗರದಿಂದ ಈದ್–ಮಿಲಾದ್ ಆಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಈದ್–ಈ–ಮಿಲಾದ್–ಉನ್–ನಬಿ ಹಬ್ಬವಾದ ಈದಿನ ಮುಸ್ಲಿಂ ಸಮುದಾಯದವರಿಗೆ ಮಹತ್ವಪೂರ್ಣ ದಿನವಾಗಿದೆ. ಇಸ್ಲಾಂನ ಕೊನೆಯ ಪ್ರವಾದಿ ಹಜರತ್ ಮುಹಮ್ಮದ್ ಈ ದಿನದಂದೇ ಜನಿಸಿ, ಅಂದೇ ಮರಣ ಹೊಂದಿದ್ದರು. ಈ ಹಬ್ಬವನ್ನು ಈದ್–ಈ–ಮಿಲಾದ್ ಅಥವಾ ಮೌಲಿದ್ ಎಂದೂ ಕರೆಯುತ್ತಾರೆ ಎಂದು ಹುಡಾ ಅಧ್ಯಕ್ಷ ಹಾಗೂ ಅಂಜುಮನ್ ಖಿದ್ಮತೆ ಇಸ್ಲಾಂ ಕಮಿಟಿಯ ಅಧ್ಯಕ್ಷ ಹೆಚ್.ಎನ್ ಮಹಮ್ಮದ್ ಇಮಾಮ್ ನಿಯಾಜಿ ಹೇಳಿದರು. >>4








**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ಸ್ಟುಡೆಂಟ್ ಕಾಲಂ

### ಜಾತಿ-ಮತಗಳ ಹಂಗು ತೊರೆದ ಹಬ್ಬ (ಕಥೆ)

ಕನಕನಹಳ್ಳಿಯ ಪ್ರೌಢಶಾಲೆಯಲ್ಲಿ ರಜಿಯಾ, ಸ್ನೇಹ ಮತ್ತು ಸ್ಫೂರ್ತಿ ಎಂಬ ಮೂವರು ಗೆಳತಿಯರಿದ್ದರು. ಅವರೆಲ್ಲರೂ 10ನೇ ತರಗತಿ ವಿದ್ಯಾರ್ಥಿನಿಯರಾಗಿದ್ದರು. ಒಂದು ದಿನ ಮೂವರು ಒಂದೆಡೆ ಕುಳಿತು ಮಾತಾಡುತ್ತಿದ್ದರು. ಆಗ ಸ್ನೇಹ 'ಲೇಯ್, ರಜಿಯಾ ಸ್ಫೂರ್ತಿ, ಶನಿವಾರ ಗೌರಿ-ಗಣೇಶ ಹಬ್ಬ ಇದೆ. ಈ ಸಲ ನಾವೆಲ್ಲರೂ ಸೇರಿ ಶಾಲೆಯಲ್ಲಿ ಅದ್ದೂರಿಯಾಗಿ ಗೌರಿ-ಗಣೇಶ ಹಬ್ಬವನ್ನು ಆಚರಿಸೋಣ ಎಂದಳು.



ಆಗ ಸ್ಫೂರ್ತಿ 'ಹೌದು, ನಾವು ಶಾಲೆಯಲ್ಲಿ ಗೌರಿ-ಗಣೇಶ ಹಬ್ಬವನ್ನು ಆಚರಿಸುವುದು ಇದೆ ಕೊನೆ ಸಲ. ನಮ್ಮ ಎಸ್ಸೆಸ್ಸೆಲ್ಸಿ ಫಲಿತಾಂಶಗಳು ಉತ್ತಮವಾಗಿ ಬರಲಿ ಎಂದು ಆ ವಿನಾಯಕನಲ್ಲಿ ಬೇಡಿಕೊಳ್ಳಲು ಇದೊಂದು ಉತ್ತಮ ಅವಕಾಶ' ಎಂದಳು. "ನೀವಿಬ್ಬರು ಹೇಳುತ್ತಿರುವುದು ಸರಿಯಾಗಿದೆ. ಸೋಮವಾರದಂದು ನಮ್ಮ ತರಗತಿಯಲ್ಲಿ ಈ ವಿಷಯದ ಬಗ್ಗೆ ಮಾತನಾಡಿ ಶಿಕ್ಷಕರಿಗೆ ತಿಳಿಸೋಣ" ಎಂದಳು ರಜಿಯಾ. ಗೌರಿ-ಗಣೇಶ ಹಬ್ಬದ ಕುರಿತು ಮಾತಾಡುತ್ತಾ ಗಣಪತಿ ಹಬ್ಬ ಯಾವಾಗ ಬರುತ್ತೆ ಎನ್ನುವ ಕುತೂಹಲದಲ್ಲಿದ್ದರು.

ಮರುದಿನ ಶಾಲೆಯಲ್ಲಿ ಮೂರು ಜನ ಗೆಳತಿಯರು ಈ ವಿಷಯವನ್ನು ತನ್ನ ಸಹಪಾಠಿ ಹಾಗೂ ತಮ್ಮ ತರಗತಿ ಶಿಕ್ಷಕರ ಮುಂದಿಟ್ಟರು. ಆಗ ಶಿಕ್ಷಕರು 'ಸರಿ ಮಕ್ಕಳೇ ಗೌರಿ-ಗಣೇಶ ಹಬ್ಬವನ್ನು ಪ್ರತಿವರ್ಷ ಆಚರಿಸುವುದಕ್ಕಿಂತ ಈ ವರ್ಷ ವಿಶೇಷವಾಗಿ ಆಚರಿಸೋಣ' ಎಂದರು. ಜೊತೆಗೆ ಇದರ ಜವಾಬ್ದಾರಿಯನ್ನು ನೀವು ಮೂವರು ವಹಿಸಿಕೊಳ್ಳಬೇಕೆಂದು ಹೇಳಿದರು. ಮೂರು ಜನ ಗೆಳತಿಯರು ಒಪ್ಪಿದರು. ಹಬ್ಬದ ದಿನಕ್ಕೋಸ್ಕರ ಎದುರು ನೋಡುತ್ತಿದ್ದರು.



ಆ ದಿನವೂ ಬಂದಿತು. ಶಾಲೆಯ ಎಲ್ಲಾ ಮಕ್ಕಳು ಅತ್ಯಂತ ಸಡಗರದಿಂದ ಹೊಸ ಬಟ್ಟೆಯನ್ನು ಧರಿಸಿ ಶಾಲೆಗೆ ಹಾಜರಾಗಿದ್ದರು. ಮೂರು ಜನ ಗೆಳತಿಯರು ಗಣೇಶನ ಪೂಜೆ ಸಿದ್ಧತೆ ಮಾಡುತ್ತಿದ್ದರು. ಅವರು ಒಂದೊಂದು ಕೆಲಸವನ್ನು ಒಬ್ಬೊಬ್ಬರು ಹಂಚಿಕೊಂಡು ಕೆಲಸ ಮಾಡುತ್ತಿದ್ದರು. ಆಗ ಕೆಲವು ಕಿಲಾಡಿ ವಿದ್ಯಾರ್ಥಿನಿಯರು ರಜಿಯಾಳಿಗೆ "ಈ ಹಬ್ಬ ನಮ್ಮ ಜಾತಿಯವರದು. ನೀವು ಮುಸ್ಲಿಮರು. ಈ ಹಬ್ಬ ನಿಮ್ಮದಲ್ಲ. ನಮ್ಮ ಹಬ್ಬಗಳಲ್ಲಿ ನೀವು ಮೂಗು ತೂರಿಸುವಂತಿಲ್ಲ" ಎಂದು ಅವಳ ಮನಸ್ಸಿಗೆ ನೋವನ್ನುಂಟು ಮಾಡಿದರು. ಈ ಮಾತುಗಳನ್ನು ಕೇಳಿದ ರಜಿಯಾಳ ಮನಸ್ಸಿಗೆ ನೋವಾಯಿತು. ಅವಳ ಉತ್ಸಾಹ ಕಡಿಮೆಯಾಯಿತು. ಆದರೂ ಅವಳು ತನಗೆ ವಹಿಸಿದ ಕೆಲಸವನ್ನು ಸಪ್ಪೆ ಮೋರೆಯಲ್ಲಿಯೇ ಅಚ್ಚುಕಟ್ಟಾಗಿ ಮಾಡಿ ಮುಗಿಸಿದಳು. ಗಣೇಶನ ವಿಗ್ರಹ ಪೂಜೆ ಸಮಯವೂ ಹತ್ತಿರ ಬರುತ್ತಿತ್ತು. ರಜಿಯಾಳ ಸಪ್ಪೆ ಮುಖವನ್ನು ಕಂಡ ಸ್ಫೂರ್ತಿ ಮತ್ತು ಸ್ನೇಹ "ಏಕೆ ಸಪ್ಪಗಿದಿಯಾ,,,? ಏನಾಯ್ತು!?" ಎಂದು ರಜಿಯಳನ್ನು ಕೇಳಿದಾಗ, ಅವಳು 'ಏನಿಲ್ಲ,,, ಏನಿಲ್ಲ,, ನನಗೆನಾಗಿದೆ, ನಾನು ಸರಿಯಾಗಿದ್ದೇನೆ' ಎಂದು ಸುಳ್ಳು ಹೇಳಿದಳು. ರಜಿಯಾ ಇದುವರೆಗೂ ಒಂದೂ ಸುಳ್ಳು ಹೇಳಿಲ್ಲ. ಆದರೆ ಇವತ್ತು ನಮ್ಮೆದುರು ಏನೋ ಮುಚ್ಚಿಡುತ್ತಿದ್ದಾಳೆ ಎನಿಸಿತು. ನಂತರ ಅವಳನ್ನು ಕಾಡಿಸಿ ಕಾಡಿಸಿ ಕೇಳಿದಾಗ ಸತ್ಯ ಗೊತ್ತಾಯಿತು. ಆಗ ಸ್ನೇಹ ಮತ್ತು ಸ್ಫೂರ್ತಿ ಇಬ್ಬರೂ ರಜಿಯಾಳನ್ನು ಕಿಲಾಡಿ ವಿದ್ಯಾರ್ಥಿಗಳಿರುವಲ್ಲಿ ಕರೆದುಕೊಂಡು ಹೋಗಿ, "ಇವಳೇಕೆ ಈ ಹಬ್ಬಗಳಲ್ಲಿ ಭಾಗವಹಿಸಬಾರದು? ಇಂತ ಜಾತಿಯವರು ಇಂತದ್ದೇ ಹಬ್ಬಗಳಲ್ಲಿ ಭಾಗವಹಿಸಬೇಕೆಂಬ ಕಾನೂನು ಏನಾದ್ರೂ ಇದೆಯಾ? ಜಾತಿಗಳನ್ನು ನಾವು ಮಾಡಿಕೊಂಡಿದ್ದು. ದೇವರು ಒಬ್ಬನೇ ನಾಮ ಹಲವು. ನಾವು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ದೇಶದವರು. ದೇವರ ದೃಷ್ಟಿಯಲ್ಲಿ ನಾವು ಎಲ್ಲರೂ ಸಮಾನರು" ಎನ್ನುವ ಮಾತುಗಳಿಂದ ಆ ಕಿಲಾಡಿ ವಿದ್ಯಾರ್ಥಿನಿಯರಿಗೆ ತಿಳಿಸಿ ಹೇಳಿದರು. ನಂತರ ರಜಿಯಾಳನ್ನು ಸಮಾಧಾನ ಪಡಿಸಿದರು. ಏಕದಂತನ ಮೂರ್ತಿ ಪೂಜೆಯಲ್ಲಿ ಎಲ್ಲರೂ ಭಾಗವಹಿಸಿ ಅತ್ಯಂತ ಸಡಗರ ಸಂಭ್ರಮ ಭಕ್ತಿಯಿಂದ ಈ ಗೌರಿ-ಗಣೇಶ ಹಬ್ಬವನ್ನು ಜೀವನದ ಕೊನೆಯವರೆಗೂ ನೆನಪು ಉಳಿಯುವಂತೆ ಮಾಡಿದರು. ಹಾಗೆಯೇ ಮೂವರು ಆದರ್ಶ ಗೆಳತಿಯರು ಎನಿಸಿಕೊಂಡರು.

– **ಎಸ್. ಸೌಮ್ಯ.,** 10ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬಸರಕೋಡು, ವಿಜಯನಗರ ಜಿಲ್ಲೆ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಇಲ್ಲಗಳ ಮಧ್ಯೆ ಹ್ಯಾಟ್ರಿಕ್ ಪದಕ ವಿಜೇತ ಮರಿಯಪ್ಪನ್ ತಂಗವೇಲು

## ಪದ್ಮಶ್ರೀ, ಖೇಲ್ ರತ್ನ ಹಾಗೂ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದ ಭಾರತ ಸರ್ಕಾರ





ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

ನನ್ನ ಹಣೆಬರಹ ಸರಿ ಇಲ್ಲ, ನನಗೆ ಸಹಕಾರ ಕೊಡುವವರು ಯಾರು ಇಲ್ಲ, ನನ್ನ ಪರವಾಗಿ ದೇವರಿಲ್ಲ ಅದಿಲ್ಲ, ಇದಿಲ್ಲ ಎಂದು ಗೋಣಗಿ ಸಮಯ ವ್ಯರ್ಥ ಮಾಡುವವರ ಮಧ್ಯೆ ಇರುವುದರಲ್ಲಿಯೇ ಸಾಧಿಸಿ ಹೆಸರು ಇತಿಹಾಸ ಪುಟದಲ್ಲಿ ಅಜರಾಮರವಾಗಿ ಉಳಿಯ ಬೇಕೆಂದು ನಿಲ್ಲದೆ ಮುನ್ನುಗುವವರು ಹಲವರು ಅವರಲ್ಲಿ ಇವರು ಒಬ್ಬರು.

ಮರಿಯಪ್ಪನ್ ತಂಗವೇಲು ಭಾರತ ಕಂಡ ಶ್ರೇಷ್ಠ ಪ್ಯಾರಾ ಒಲಂಪಿಕ್ ಹೈ ಜಂಪರ್ ಇವರು 2016 ರ ರಿಯೊ ದಲ್ಲಿ ಚಿನ್ನದ ಪದಕ, 2020 ಟೋಕಿಯೊದಲ್ಲಿ ಬೆಳ್ಳಿ ಮತ್ತು 2024 ಪ್ಯಾರಿಸ್ನಲ್ಲಿ ಕಂಚಿನ ಪದಕವನ್ನು ಗೆದ್ದಿರುವ ಟ್ರಿಪಲ್ ಪ್ಯಾರಾ ಒಲಂಪಿಕ್ ಪದಕ ವಿಜೇತ ಕ್ರೀಡಾಪಟು.

ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ ಮತ್ತು ಕಂಚಿನೊಂದಿಗೆ ಡಬಲ್ ಪದಕ ವಿಜೇತರು ಇದಲ್ಲದೆ, ಏಷ್ಯನ್ ಪ್ಯಾರಾ ಗೇಮ್ಸ್ ಬೆಳ್ಳಿ ಪದಕ ವಿಜೇತರಾಗಿದ್ದಾರೆ. ತಮಿಳುನಾಡಿನ ಸೇಲಂ ಜಿಲ್ಲೆಯ ಪೆರಿಯವಾಡಗಂಪಟ್ಟಿ ಗ್ರಾಮದಲ್ಲಿ(ಜನನ 28 ಜೂನ್ 1995) ಜನಿಸಿದ ಮರಿಯಪ್ಪನ್ ತಂಗವೇಲು 04 ಸಹೋದರರು ಮತ್ತು ಒಬ್ಬ ಸಹೋದರಿಯನ್ನು ಹೊಂದಿದ್ದಾರೆ ಅವರ ತಂದೆಯು ಕಾರಣಾಂತರಗಳಿಂದ ಕುಟುಂಬವನ್ನು ತೊರೆದರು ಮತ್ತು ಅವರ ತಾಯಿ, ಸರೋಜಾ ತಮ್ಮ ಮಕ್ಕಳನ್ನು ಒಂಟಿ ತಾಯಿಯಾಗಿ ಬೆಳೆಸಿದರು,ತರಕಾರಿ ಮಾರಾಟ ಹಾಗೂ ಗಾರೆ ಕೆಲಸವನ್ನು ಮಾಡಿ ಇವರನ್ನು ಸಾಕಿದ್ದಾರೆ.

ಇವರು ಐದನೇ ವಯಸ್ಸಿನಲ್ಲಿ, ಶಾಲೆಗೆ ನಡೆದುಕೊಂಡು ಹೋಗುತ್ತಿದ್ದಾಗ ನಡೆದ ಬಸ್ ಅಪಘಾತದಲ್ಲಿ ಬಲಗಾಲಿನ ಶಾಶ್ವತ ಅಂಗ ವೈಫಲ್ಯತೆಗೆ ಒಳಗಾದರು.

ಬಸ್ಸು ಅವರ ಕಾಲನ್ನು ಮೊಣಕಾಲಿನ ಕೆಳಗೆ ನುಜ್ಜುಗುಜ್ಜುಗೊಳಿಸಿತು, ಇದರಲ್ಲಿಯೂ ಅವರು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದರು.

ಇಷ್ಟಾದರೂ ಧೈರ್ಯವನ್ನು ಕಳೆದುಕೊಳ್ಳದೆ ಇತರೆ ಮಕ್ಕಳಂತೆಯೇ ಸಮರ್ಥ ಎಂಬುದನ್ನು ಸಾಬೀತು ಮಾಡಿಕೊಂಡರು.

ತಮ್ಮ ಕ್ರೀಡಾ ವಿಜಯಗಳ ನಂತರ ಬಂದ ಹಣದಲ್ಲಿ ತಾಯಿಗೆ ಜಮೀನನ್ನು ಕೊಡಿಸಿ ಭತ್ತವನ್ನು ಬೆಳೆಯುವುದರ ಮೂಲಕ ಕುಟುಂಬವನ್ನು ಸ್ಥಿರತೆಗೆ ಕೊಂಡೊಯ್ದಿದ್ದಾರೆ.

ಇವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಹೆಚ್ಚಿನದಾಗಿ ವಾಲಿಬಾಲ್ ಆಟವನ್ನು ಇಷ್ಟಪಟ್ಟು ಆಡುತ್ತಿದ್ದರು ಅವರ ಶಾಲೆಯ ದೈಹಿಕ ಶಿಕ್ಷಣ ಬೋಧಕರ ಮಾರ್ಗದರ್ಶನದ ತರುವಾಯ ಅಥ್ಲೆಟಿಕ್ಸ್ ನಲ್ಲಿ ಎತ್ತರ ಜಿಗಿತವನ್ನು ಆಯ್ದುಕೊಂಡರು.

ಕಠಿಣ ತರಬೇತಿಯ ತರುವಾಯ ಅಂತರ ಕಾಲೇಜು,ಅಂತರ ವಿಶ್ವವಿದ್ಯಾನಿಲಯಗಳಲ್ಲಿ ಪ್ರಶಸ್ತಿಗಳನ್ನು ಪಡೆಯಲು ಆರಂಭಿಸಿದರು.

2013 ರಲ್ಲಿ,ಅವರ ಪ್ರಸ್ತುತ ತರಬೇತುದಾರ ಸತ್ಯನಾರಾಯಣ, ಭಾರತೀಯ ಸ್ಪೋರ್ಟ್ಸ್ ಅಕಾಡೆಮಿ ಆಫ್ ದಿ ಡಿಫರೆಂಟ್ಲಿ-ಅಬಲ್ಡ್ ಬೆಂಬಲದೊಂದಿಗೆ,ಭಾರತೀಯ ರಾಷ್ಟ್ರೀಯ ಪ್ಯಾರಾ-ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಅವರ ಪ್ರದರ್ಶನವನ್ನು ಮೊದಲು ಗಮನಿಸಿದರು ಮತ್ತು ಔಪಚಾರಿಕವಾಗಿ ಅವರನ್ನು 2015 ರಲ್ಲಿ ವಿದ್ಯಾರ್ಥಿಯಾಗಿ ಕರೆದೊಯ್ದು ಮತ್ತಷ್ಟು ತರಬೇತಿ ನೀಡಿದರು.

ಮಾರ್ಚ್ 2016 ರಲ್ಲಿ,ಮರಿಯಪ್ಪನ್ ಟುನೀಶಿಯಾದ ಐ.ಪಿ.ಸಿ. ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಪುರುಷರ ಟಿ-42 ಎತ್ತರ ಜಿಗಿತ ಸ್ಪರ್ಧೆಯಲ್ಲಿ 1.78 ಮೀ (5 ಅಡಿ 10 ಇಂಚು) ಎತ್ತರವನ್ನು ಜಿಗಿದು 2016 ರ ಬೇಸಿಗೆ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದರು.

ರಿಯೊದಲ್ಲಿ, ಅವರು ಮತ್ತೊಮ್ಮೆ ಟಿ-42 ವಿಭಾಗದಲ್ಲಿ 1.89 ಮೀ (6 ಅಡಿ 2 ಇಂಚು) ಜಿಗಿತದೊಂದಿಗೆ ಚಿನ್ನದ ಪದಕವನ್ನು ಗೆದ್ದರು.





ನವೆಂಬರ್ 2019 ರಲ್ಲಿ,ದುಬೈನಲ್ಲಿ ನಡೆದ 2019 ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪುರುಷರ ಟಿ-63 ಹೈ ಜಂಪ್ ಸ್ಪರ್ಧೆಯಲ್ಲಿ 1.80 ಮೀ (5 ಅಡಿ 11 ಇಂಚು) ಎತ್ತರ ಜಿಗಿದು ಕಂಚಿನ ಪದಕವನ್ನು ಗೆದ್ದರು.

2020 ರ ಬೇಸಿಗೆ ಪ್ಯಾರಾಲಿಂಪಿಕ್ಸ್‌ನಲ್ಲಿ ಪುರುಷರ ಟಿ-63 ಹೈ ಜಂಪ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕವನ್ನು ಗೆದ್ದರು ,ಇದು ಅವರ ಪ್ಯಾರಾಲಿಂಪಿಕ್ ವೃತ್ತಿಜೀವನದಲ್ಲಿ ಎರಡನೇ ಪದಕವಾಗಿದೆ. ಇವರ ಈ ಹಿಂದಿನ ಸಾಧನೆಗಳನ್ನು ಪರಿಗಣಿಸಿ ಭಾರತ ಸರ್ಕಾರ ಪದ್ಮಶ್ರೀ, ಖೇಲ್ ರತ್ನ ಹಾಗೂ ಅರ್ಜುನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಹಲವಾರು ಪ್ರತಿಷ್ಠಿತ ಸಂಘ ಸಂಸ್ಥೆಗಳು ಆರ್ಥಿಕವಾಗಿ ಸಾಕಷ್ಟು ಸಹಾಯವನ್ನು ನೀಡಿವೆ. ಗೆಲ್ಲಬೇಕೆಂಬ ಛಲ ಮನದಲ್ಲಿ ಮೂಡಿದರೆ ಎಲ್ಲವನ್ನು ಸಾಧಿಸಲು ಸಾಧ್ಯ ಅದಕ್ಕೆ ಬೇಕಾಗಿರುವುದು ಕಠಿಣ ಶ್ರಮ ಮತ್ತು ಮಾಡುವ ಇಚ್ಛೆ ಸರಿಯಾದ ಮಾರ್ಗದರ್ಶನ ಆ ನೇರವಾದ ಸ್ಪಷ್ಟಗುರಿ ಮಾತ್ರ. ಕಳೆದುಕೊಂಡ ಕಾಲಿನ ಬಗ್ಗೆ ಚಿಂತೆ ಮಾಡದೆ,ಕಾಲನ ಕೈಗೆ ತಮ್ಮ ಜೀವನವನ್ನು ನೀಡದೆ ಇದ್ದುದರಲ್ಲಿಯೇ ಎದ್ದುನಿಂತು ಗೆದ್ದು ಬಾಗಿಬೀಗಿದ ನಿಮಗೆ ಶರಣು ಶರಣಾರ್ಥಿಗಳು.

ಇನ್ನಷ್ಟು ಸಾಧನೆಗಳು ನಿಮ್ಮಿಂದಾಗಲಿ, ನನ್ನಿಂದ ಸಾಧ್ಯವಿಲ್ಲ ಎಂಬ ಸ್ವಗತ ಮನಸ್ಥಿತಿ ಉಳ್ಳವರು ಮೈಗೂಡವಿ ಎದ್ದು ನಿಲ್ಲಲಿ. ಏನನ್ನಾದರೂ ಸಾಧಿಸಲಿ ಎಂಬುದೇ ನಮ್ಮ ಬರವಣಿಗೆಯ ಇಂಗಿತ.

ತಂಗವೇಲು ಅವರಿಗೆ ಆಲ್ ದ ಬೆಸ್ಟ್..

# ಮನೆ ಬಾಗಿಲಿಗೆ ನವನೀತ ಜೋಕುಮಾರ

ಕನ್ನಡ ನಾಡಿನ ಮಹತ್ವದ ಹಬ್ಬಗಳ ಸಂಭ್ರಮಾಚರಣೆಯ ಸ್ವಾರಸ್ಯ ಆಗಾಧವಾದದ್ದು.

ವಿಘ್ನ ನಿವಾರಕ ವಿಘ್ನೇಶ್ವರನ ಹಬ್ಬ ಬರಖಾಸ್ತುಗೊಂಡ ನಂತರ ಆರಂಭವಾಗುವುದು ಜನಪದೀಯ ಸೊಗಡಿನ ರಗಡಾದ ಝಲಕ್ ನೊಂದಿಗೆ ಧಾವಿಸುವ ಜೋಕುಮಾರ ಸ್ವಾಮಿಯ ಪರ್ವ

ಭಾದ್ರಪದ ಮಾಸದ ಅಷ್ಟಮಿಯ ದಿನ ಜನಿಸುವ ಜೋಕುಮಾರ ಸ್ವಾಮಿ ನಾಡಿನೆಲ್ಲೆಡೆ ಮನೆಮನೆಗೆ ತೆರಳಿ ಸವ9 ಜನತೆಯಿಂದ ಪೂಜಿತಗೊಂಡು ಭಕ್ತರ ಇಷ್ಟಾರ್ಥ ಸಿದ್ಧಿಗಳನ್ನು ಈಡೇರಿಸುವ ದೈವವೆನಿಸಿದ್ದಾನೆ.

ಜೋಕುಮಾರ ಸ್ವಾಮಿ ಜೋಕ ಎಂಬ ಮುನಿ ಹಾಗೂ ಜೇಷ್ಠಾ ದೇವಿಯ ಉದರದಲ್ಲಿ ಆವಿಭ9ವಿಸಿದ ಎಂದು ಹೇಳಲಾಗುತ್ತದೆ.

ಗಂಗಾಮಾತ ಸಮಾಜದ ಮಹಿಳೆಯರು ವಿಶ್ವಕರ್ಮರ ಮನೆಯಲ್ಲಿ ಮಣ್ಣಿನಿಂದ ತಿದ್ದಿ,ತೀಡಿ ನಿಮಿ9ಸಿದ ಬಹು ಸೊಗಸಾದ ಜೋಕುಮಾರ ಮೂತಿ9ಯನ್ನು ತೆಗೆದುಕೊಂಡು ಅಲಂಕರಿಸಿದ ಬಿದಿರಿನ ಬುಟ್ಟಿಯಲ್ಲಿ ಬೇವಿನ ತೊಪ್ಪಲಿನ ಉಡುಗೆ ಯೊಂದಿಗೆ ದಾಸವಾಳ, ಚೆಂಡು ಹೂವು ವಿವಿಧ ಪುಷ್ಪಗಳಿಂದ ಅಲಂಕರಿಸಿಕೊಂಡು ಬಾಯಿಯಲ್ಲಿ ನವನೀತ (ಬೆಣ್ಣೆ) ತುಂಬಿಕೊಂಡು ಗಾಂಭೀರ್ಯದಿಂದ ವಿರಾಜಮಾನನಾದ ಜೋಕುಮಾರ ಸ್ವಾಮಿಯನ್ನು ತಲೆಯ ಮೇಲೆ ಹೊತ್ತು ಮೊದಲಿಗೆ ಸಂಪ್ರದಾಯದಂತೆ ನಿಗದಿಪಡಿಸಿದ ಮನೆಗಳಿಗೆ ತೆರಳಿ ಅವರಿಂದ ಪ್ರಥಮ ಪೂಜೆಗೊಳ್ಳುತ್ತಾನೆ.



ಎಸ್.ಎಚ್.ಸೋಮಶೇಖರ
ಶಿಕ್ಷಕರು. ಮಾಗಳ

ಗಂಗಾಮತ ಸಮಾಜದ ಮಹಿಳೆಯರ ನಾಲ್ಕರಿಂದ ಐದಾರು ಸದಸ್ಯರುಳ್ಳ ತಂಡದೊಂದಿಗೆ ಅಲಂಕರಿಸಿದ ಜೋಕುಮಾರ ಸ್ವಾಮಿಯನ್ನು ಬಿದಿರಿನ ಬುಟ್ಟಿಯಲ್ಲಿ ಹೊತ್ತು ಏಳು ದಿನಗಳ ಕಾಲ ಊರಿನ ಮನೆ ಮನೆಗಳಿಗೆ ಕಾಲ್ನಡಿಗೆಯಲ್ಲೆ ತೆರಳಿ ಮನೆ ಮನೆಗಳ ಕಟ್ಟೆಗಳ ಮೇಲೆ ಜೋಕುಮಾರನ ಬುಟ್ಟಿಯಿರಿಸಿ ಜೋಕುಮಾರ ಸ್ವಾಮಿಯ ಲೀಲೆಯನ್ನು ಜನಪದ ಹಾಡಿನ ರೂಪದಲ್ಲಿ ಸುಶ್ರಾವ್ಯವಾಗಿ ಮುಕ್ತ ಕಂಠದಿಂದ ಹಾಡಿ ಹೊಗಳುತ್ತಾರೆ.

ಅಡ್ಡಡ್ಡ ಮಳೆ ಬಂದ,ದೊಡ್ಡ ದೊಡ್ಡ ಕೆರಿ ತುಂಬಿ,ಗೊಡ್ಡು ಗಳೆಲ್ಲ ಹೈನಾಗಿ ಜೋಕುಮಾರ,ಮಡಿವಾಳರ ಕೇರಿ ಹೊಕ್ಕಾನ ಜೋಕುಮಾರ,ಮುಡಿ ತುಂಬ ಹೂವು ಮುಡಿದಂತ ಚೆಲುವಿ ತನ್ನ ಮಡದಿಯೆಂದ ಜೋಕುಮಾರ ಎಂಬ ಜನಪದ ಹಾಡನ್ನು ಸಾಮೂಹಿಕವಾಗಿ ಹಾಡಿ ಜೋಕುಮಾರನ ಮಹಿಮೆಯನ್ನು ಕೊಂಡಾಡುತ್ತಾರೆ.

ನಂತರ ಮನೆಯವರು ಜೋಕುಮಾರನನ್ನು ಪೂಜಿಸಿದ ಬಳಿಕ ಕೊಡುವ ಅಕ್ಕಿ,ಜೋಳ,ಇತರೆ ಬಗೆಯ ದವಸ ಧಾನ್ಯಗಳನ್ನು ಪಡೆದು ಅದಕ್ಕೆ ಪ್ರತಿಯಾಗಿ ಅವರಿಗೆ ಬುಟ್ಟಿ ಹೊತ್ತ ಗಂಗಾಮಾತ ಸಮಾಜದ ಮಹಿಳೆಯರು(ಅಚ9ಕರು)ಎಲೆಯಲ್ಲಿ ಕಡುಕಪ್ಪು ಮಸಿ,ಬೇವಿನ ಎಸಳುಳ್ಳ ಪತ್ರೆ ಹಾಗೂ ಜೋಳದ ನುಚ್ಚಿನಿಂದ ತಯಾರಿಸಿದ ಅಂಬಲಿಯನ್ನು ಕೊಟ್ಟು ಹರಸುತ್ತಾರೆ. ಆ ಅಂಬಲಿ ಹಾಗೂ ಬೇವಿನ ಪತ್ರೆಯ ಮಿಶ್ರಣದ ಚರಗವನ್ನು ರೈತರು ಮಾರನೇ ದಿನ ತಮ್ಮ ಹೊಲಕ್ಕೆ ಹೋಗಿ ಚರಗ ಚೆಲ್ಲುತ್ತಾರೆ.ಹೀಗೆ ಮಾಡುವುದರಿಂದ ಮಳೆ,ಬೆಳೆ ಸಮೃದ್ಧಿಯಾಗುತ್ತದೆ ಎಂಬುದು ರೈತರ ನಂಬಿಕೆ.

ಮಕ್ಕಳ ಸಂತಾನವಿರದವರು ಸಂತಾನ ಭಾಗ್ಯಕ್ಕಾಗಿ ಜೋಕುಮಾರನ ಬಾಯಿಯಲ್ಲಿ ಬೆಣ್ಣೆ ಇಟ್ಟು ಪೂಜಿಸುತ್ತಾರೆ.ಇದರಿಂದ ಜೋಕುಮಾರನ ಕೃಪೆಯಿಂದ ಅವರಿಗೆ ಸಂತಾನ ಭಾಗ್ಯ ಪ್ರಾಪ್ತಿಯಾಗುತ್ತದೆ ಎಂಬುದು ನಂಬಿಕೆ.

ಹಾಗೇನೇ ವಿವಾಹವಾಗದವರು ಶ್ರದ್ಧೆಯಿಂದ ಜೋಕುಮಾರನ ಪೂಜಿಸಿದರೆ ಬಹುಬೇಗ ವೈವಾಹಿಕ ಜೀವನ ಹೊಂದುತ್ತಾರೆ ಎಂಬುದು ಮತ್ತೊಂದು ನಂಬಿಕೆ. ಹೀಗೆ ರೈತರ ಪಾಲಿಗೆ ಮಳೆ ತರುವ ಆರಾಧ್ಯ ದೈವನೆನಿಸಿದ ಜೋಕುಮಾರ ಸ್ವಾಮಿ ಸಪ್ತ ದಿನಗಳ ಕಾಲ ಊರಿನಲ್ಲಿ ಬಹು ಠೀವಿಯಿಂದ ಮೆರೆದು ಕೊನೆಗೆ ಅಸ್ತಂಗತನಾಗುತ್ತಾನೆ.

ಏಳನೇ ದಿನ ಜೋಕುಮಾರ ಕೇರಿಗೆ ಹೋಗಿ ಗೊತ್ತು ಮಾಡಿದ ಮಹಿಳೆಯಿಂದ ಚೂರಿ ಹಾಕಲ್ಪಟ್ಟು ಸಾಯುತ್ತಾನೆ.ನಂತರ ಸತ್ತ ಜೋಕುಮಾರನನ್ನು ಅಗಸರು ಬಟ್ಟೆ ಒಗೆಯುವ ಹಳ್ಳದ ದಂಡೆಗಳಲ್ಲಿ,ಕೆರೆಗಳಲ್ಲಿ ನದಿಗಳಲ್ಲಿ ಒಯ್ದು ಬಿಸಾಕುತ್ತಾರೆ.



ಜೋಕುಮಾರನ ವಿಸರ್ಜನೆ ನಂತರ ಮೂರು ದಿನಗಳ ಕಾಲ ಮಡಿವಾಳರು ಬಟ್ಟೆ ಒಗೆಯುವಂತಿಲ್ಲ ಎಂಬುದು ಪ್ರತೀತಿ.

**ಕವಿ ಮನಸು**

## ನಗು ಮೊಗದ ಗುಲಾಬಿ



ನೀ ಅದೇಷ್ಟು ಸುಂದರ
ನೀ ಅರಳಿ ನಿಂತು ಎಲ್ಲರ ಕಣ್ಮನಗಳನ್ನು
ಸೆಳೆಯುವ ಗುಣವೇ ವಿಶಿಷ್ಟ.
ಪ್ರೇಮಿಗಳ ಸಂಕೇತವೆ ನೀನಾಗಿರುವಾಗ
ನಿನ್ನ ಬಣ್ಣ ರೂಪ ವನಪು ವೈಯಾರ
ವರ್ಣಿಸಲು ಹೇಗೆ ಸಾಧ್ಯ.
ಮೃದು ಕೋಮಲ ಮನಸ್ಸು, ವ್ಯಕ್ತಿತ್ವ
ನಿನ್ನದು.ನಿನ್ನನ್ನೊಮ್ಮೆ ಹಿಡಿದು ಸ್ಪರ್ಶಿಸಿ
ಮುತ್ತಿಡಬೇಕೆಂಬ ಮಹಾದಾಸೆ.
ಆದರೆ ಸ್ಪರ್ಶಿದರೆ ಎಲ್ಲಿ ಮುದುಡಿ
ಬಾಡಿಹೋಗುವೆ ಎಂಬ ಆಂತಕ. ಹೀಗಾಗಿ
ದೂರದಿಂದಲೇ ನೀನು ಅರಳಿ ನಿಂತು
ಹೊರ ಸುಸೂವ ನಗುವನ್ನು ಕಂಡು
ಆಸ್ವಾದಿಸುತ್ತಿರುವೆ. ಈ ಕೆಂಗುಲಾಬಿಯ ನಗು
ಸದಾ ಹೀಗೆ ಇರಲಿ ನಾನು ಸದಾ
ನೋಡುತ್ತಲೇ ನಿಶೆಏರಿ ಸಂಭ್ರಮಿಸುವೆ.
ನೀನು ಹೂವಾಗು ನಾನು ಮುಳ್ಳಾಗಿ
ಜೋತೆಗಿರುವೆ.

– ಎಂ.ಎಂ.ಶಿವಪ್ರಕಾಶ್
ಹೊಸಪೇಟೆ

## ಅಲೆಮಾರಿ


ಅಲೆಮಾರಿ ಬದುಕಿಗೆ ಆಗಸವೇ ಸೂರು
ತಿರುಗುತ್ತಾ ಇರುವರು ದಿನಕ್ಕೊಂದು ಊರು
ಹಸಿವ ನೀಗಿಸಲು ಕುಡಿಯುವರು ನೀರು
ಭೂಮಿ ತಾಯಿಯ ಮಡಿಲನ್ನೇ ಹೊದ್ದು
ಮಲಗುವರು

ಕನಸು ಆಸೆಗಳು ಬತ್ತಿ ಹೋಗಿ
ಭಾವನೆಗಳು ಗಾಳಿಯ ರಭಸಕ್ಕೆ ಕೊಚ್ಚಿ
ಹೋಗಿ
ಜೀವನವೇ ಬರಡು ಭೂಮಿಯಂತಾಗಿ
ಪಯಣಿಸಲು ದಿಕ್ಕೇ ತೋಚದಂತಾಗಿ

ಅಲೆಮಾರಿ ಪಟ್ಟ ಸಿಕ್ಕಿದೆ
ಕಾಣದೂರಿಗೆ ಪಯಣ ಬೆಳೆಸಬೇಕಾಗಿದೆ

–ಚೇತನ ಭಾರ್ಗವ
ಬೆಂಗಳೂರು

## ನಂಬಿಕೆ



ನಂಬಲೇ ಬೇಕು
ನಂಬಿ ಕೆಡಬೇಕು
ಕೆಟ್ಟರೆ ಬುದ್ದಿ ಬರಬೇಕು।

ಆಕಾಶ ಇರಬೇಕು
ಮೋಡ ಬರಬೇಕು
ತಂಪಾಗಿ ಮಳೆ ಬರಬೇಕು।

ಹನಿ ಹನಿ ಬೀಳಬೇಕು
ಝರಿಯಾಗಿ ಹರಿಯಬೇಕು
ನದಿಯಾಗಿ ಹರಿಯಬೇಕು।

ಮೊಳಕೆಯೊಡೆಯಬೇಕು
ಗಿಡ ಮರವಾಗಬೇಕು
ಹೂವು ಹಣ್ಣು ಬರಬೇಕು।

ಅಕ್ಷರ ಕಲಿಯಬೇಕು
ಕಲಿತು ಜಾಣರಾಗಬೇಕು
ಜಾಣರಾಗಿ ನಾಡು ಬೆಳಗಬೇಕು।

– ಚಂದ್ರಶೇಖರಯ್ಯ ರೋಣದಮಠ
ಹೊಸಪೇಟೆ

# ಕಲ್ಯಾಣ ಕರ್ನಾಟಕ ಹೋರಾಟದ ಕಣ್ಮಣಿ ಅಳವಂಡಿ ಶ್ರೀ ಶಿವಮೂರ್ತಿ ಸ್ವಾಮಿಗಳು

ಕಲ್ಯಾಣ ಕರ್ನಾಟಕ ಹೋರಾಟಕ್ಕೆ ಕೊಪ್ಪಳ ಜಿಲ್ಲೆ ತನ್ನದೇ ಆದ ವಿಶೇಷ ಕೊಡುಗೆಯನ್ನು ನೀಡಿದೆ. ಇಲ್ಲಿಯ ಹೋರಾಟಗಾರರಲ್ಲಿ ಅತಿ ಮುಂಚೂಣಿಯಲ್ಲಿದ್ದವರು ಅಳವಂಡಿಯ ಶ್ರೀ ಶಿವಮೂರ್ತಿ ಸ್ವಾಮಿಗಳು. ಇಂತಹ ಊರಿನಲ್ಲಿ ಹುಟ್ಟಿದ್ದು ನನಗೊಂದು ಹೆಮ್ಮೆ.

ಕಾಂಗ್ರೆಸ್ ಹೈದರಾಬಾದ್ ಸಂಸ್ಥಾನದಲ್ಲಿ ಸಂಘಟಿಸಿದ್ದ ಆತ್ಮ ರಕ್ಷಣಾ ಚಳುವಳಿಯಲ್ಲಿ (1947 ಆಗಸ್ಟ್ ನಿಂದ 1948 ಸಪ್ಟಂಬರ್ ವರೆಗೆ) ಸಂಸ್ಥಾನದ ಗಡಿಗಳಲ್ಲಿ ಸಂಘಟಿಸಿದ್ದ ಶಿಬಿರಗಳಲ್ಲಿ ಸ್ವಾಮಿಗಳ ನಾಯಕತ್ವದಲ್ಲಿ ಏರ್ಪಡಿಸಿದ್ದ ಮುಂಡರಗಿ ಶಿಬಿರ ಮತ್ತು ಅದರ ಉಪ ಶಿಬಿರಗಳ ಜನ ಹೈದರಾಬಾದ್ ಗಡಿಯೊಳಗೆ ನುಗ್ಗಿ ರಜಾಖಾರರ ಜೊತೆಹೋರಾಟ ನಡೆಸಿದರು. ಸಂಸ್ಥಾನದ ಕೆಲವು ಗ್ರಾಮಗಳನ್ನು ಮುಕ್ತಗೊಳಿಸಿದರು.

1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ರಾಷ್ಟ್ರವಾಯಿತು. ಆದರೆ ಹೈದರಾಬಾದಿನ ಸುಲ್ತಾನ ಮೀರ್ ಉಸ್ಮಾನ್ ಅಲಿ ಖಾನ್ ತಾನು ಸ್ವತಂತ್ರನೆಂದು ಘೋಷಿಸಿದಲ್ಲದೆ ಭಾರತ ಸರ್ಕಾರದ ವಿರುದ್ಧ ಯುದ್ಧ ಸಾರಲು ಸನ್ನದ್ಧನಾದ. 1947 ಕ್ಕಿಂತ ಒಂದೆರಡು ವರ್ಷಗಳ ಪೂರ್ವದಲ್ಲಿಯೇ ನಿಜಾಮ ಸರ್ಕಾರ ಖಾಸಿಂ ರಜ್ವಿ ಎಂಬ ಮತಾಂದನ ಕೈವಶವಾಯಿತು. ನಿಜಾಮನು ಅವನ ಕೈಗೊಂಬೆ ಯಾದನು. ಕಾಸಿಂ ರಜ್ವಿ ಇತ್ತಿಹಾದಿ ಉಲ್ ಮುಸಲ್ಮಿನ್ ಎಂಬ ಕೋಮುವಾದದ ಸಂಘಟನೆ ಯನ್ನು ಹುಟ್ಟು ಹಾಕಿದ್ದಲ್ಲದೆ 'ರಜಾಕಾರ' ಎಂಬ ಅರೆ ಸೈನ್ಯ ಪಡೆಯನ್ನು ಬೆಳೆಸಿದನು . ಈ ಮೂಲಕ ಹಿಂದುಗಳನ್ನು ಹಿಂಸೆ ಕೊಡುವ ಹಾಗೂ ಅವರ ಮನೆಗಳನ್ನು ಲೂಟಿ ಮಾಡುವ ಕಾರ್ಯಕ್ರಮಗಳಿಗೆ ಸರ್ಕಾರ ಮತ್ತು ಪೊಲೀಸರು ಬೆಂಬಲವಾಗಿ ನಿಂತರು. ಕಾಟೋ. ಲೂಟೋ, ಬೂಟೊ (ಕೊಲ್ಲು ಕೊಳ್ಳೆ ಹೊಡಿ ಮತ್ತು ಹಂಚಿಕೊಳ್ಳಿ )ಎಂಬುದು ಅಂದಿನ ರಜಾಕಾರರ ಮೂರು ಮಂತ್ರಗಳಾಗಿದ್ದವು. ಇಡೀ ಹೈದರಾಬಾದ್ ಸಂಸ್ಥಾನ ಇಂದಿನ ಭಯೋತ್ಪಾದಕರಿಗೆ ಸಮನಾದ ರಜಾ ಕಾರರ ಹಾವಳಿ ಯಲ್ಲಿ ತತ್ತರಿಸಿತು. ಆಗ ಕಾಂಗ್ರೆಸ್ ಪಕ್ಷ ಮತ್ತು ಆರ್ಯ ಸಮಾಜ ಈ ಅನ್ಯಾಯಗಳ ವಿರುದ್ಧ ಸಿಡಿದೆದ್ದವು.

ರಜಾಕಾರರು ಕೇವಲ ಹಿಂದು ಗಳನ್ನಷ್ಟೇ ಹಿಂಸೆಗೆ ಗುರಿ ಪಡಿಸಲಿಲ್ಲ. ತಮ್ಮನ್ನು ವಿರೋಧಿಸಿದ ಜಾತ್ಯತೀತ ಮನೋಭಾವದ ಸೌಹಾರ್ದ ಪ್ರಿಯ ಮುಸ್ಲಿಂ ನಾಯಕರನ್ನು ಹಿಂಸೆಗೆ ಗುರಿ ಮಾಡಿದರು.



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Hampi Times E-paper
SCAN AND READ

ಹೈದರಾಬಾದಿನ ಪ್ರಮುಖ ಉರ್ದು ಪತ್ರಿಕೆ ಇಮ್ರೋಜ್ ರಜಕಾರರನ್ನು ತೀವ್ರವಾಗಿ ಖಂಡಿಸಿತು. ಇದನ್ನು ಸಹಿಸದ ರಜಾಕಾರರು ಅದರ ಸಂಪಾದಕ ಶೋಯೆಬುಲ್ಲ ಖಾನರನ್ನು ಹೈದರಾಬಾದಿನ ನಡು ಬೀದಿಯಲ್ಲಿ ಹಾಡು ಹಗಲಿನಲ್ಲಿ ತುಂಡರಿಸಿದರು. ಉರ್ದು ಕವಿ ಮುಖದೂಂ ಮೋಹಿದೀನ್ ತಮ್ಮ ಕ್ರಾಂತಿಕಾರಿ ಗೀತೆಗಳ ಮೂಲಕ ಭೂಗತರಾಗಿದ್ದುಕೊಂಡು ರಜಕಾರರನ್ನು ವಿರೋಧಿಸಿದರು. ಆದರೆ ಇಂಥವರ ಧ್ವನಿಯನ್ನು ಕೇಳದಷ್ಟು ಕಿವುಡನಾಗಿದ್ದ ನಿಜಾಮ ..ಗೋಡೆಯ ಮೇಲಿರುವ ತನ್ನ ಅಂತ್ಯದ ಬರಹವನ್ನು ನೋಡಲಿಲ್ಲ.

ಇಂತಹ ಅವಧಿಯಲ್ಲಿ ಅಳವಂಡಿಯ ಶ್ರೀ ಶಿವಮೂರ್ತಿ ಸ್ವಾಮಿಗಳು. ಎಸ್ ನಿಜಲಿಂಗಪ್ಪ ಮತ್ತು ಸರ್ದಾರ್ ವಲ್ಲಭಾಯಿ ಪಟೇಲರ ಸಲಹೆ ಮೇರೆಗೆ ಸ್ವಾಮಿ ರಮಾನಂದ ತೀರ್ಥರು ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಹಾಗೂ ಹೈದರಾಬಾದ್ ಸಂಸ್ಥಾನದ ವಿಮೋಚನೆಗಾಗಿ ಸಕ್ರಿಯವಾಗಿ ಪಾಲ್ಗೊಂಡರು. ಕೇವಲ ಸತ್ಯಾಗ್ರಹ ಮತ್ತು ಭಾಷಣಗಳಿಂದ ರಜಾಕಾರರನ್ನು ಎದುರಿಸಿದರೆ ಹಿಂದೂಗಳ ರಕ್ಷಣೆಯಾಗುವುದಿಲ್ಲವೆಂದು ಭಾವಿಸಿದ ಸ್ವಾಮಿಗಳು ಸಶಸ್ತ್ರ ಹೋರಾಟ ಸರಿಯಾದ ಮಾರ್ಗವೆಂದು ಕಂಡರು. ಭಾರತ ಸರ್ಕಾರ ಸೈನಿಕ



ಕಾರ್ಯಾಚರಣೆಯನ್ನು ಕೈಗೊಳ್ಳದೆ ಮೀರ್ ಉಸ್ಮಾನ್ ಅಲಿಖಾನನಿಗೆ ತಿಳಿ ಹೇಳುವ ಕ್ರಿಯೆಯಲ್ಲಿ ತೊಡಗಿತ್ತು. ಇದರ ಅಂಗವಾಗಿ ಡಾ. ಕೆ ಎಮ್ ಮುನ್ಷಿಯವರನ್ನು ಹೈದರಾಬಾದಿಗೆ ಭಾರತ ಸರ್ಕಾರದ ಪ್ರತಿನಿಧಿಯಾಗಿ ಕಳಿಸಿತು. ಹಿಂದುಗಳನ್ನು ಎಲ್ಲಾ ರೀತಿಯಲ್ಲಿ ರಜಾಕಾರರು ಹಿಂಸೆ ಮಾಡುತ್ತಿದ್ದರು. ಆಗ ರಾಯಚೂರು ಜಿಲ್ಲೆಯ ಗಡಿ ಭಾಗದಲ್ಲಿ ಒಂದು ಕಡೆ ಶ್ರೀ ಶಿವಮೂರ್ತಿ ಸ್ವಾಮಿಗಳು ಇನ್ನೊಂದು ಕಡೆ ಪಂಡಿತ್ ತಾರಾನಾಥರು ಸಶಸ್ತ್ರ ಸ್ವಯಂಸೇವಕರ ಪಡೆಗಳನ್ನು ಸಂಘಟಿಸಿದರು. ಕಲಬುರ್ಗಿ ಮತ್ತು ಬೀದರ್ ಗಡಿ ಭಾಗಗಳಲ್ಲಿ ಸರ್ದಾರ್ ಶರಣಗೌಡರು ಇಂಥದ್ದೇ ಯೋಜನೆಗಳನ್ನು ಕೈಗೆತ್ತಿಕೊಂಡರು.

ದಿನಾಂಕ 17 –8 –1947 ರಂದು ಕೊಪ್ಪಳ ತಾಲೂಕಿಗೆ ಹೊಂದಿಕೊಂಡ ಮುಂಡರಗಿಯಲ್ಲಿ ಸ್ವಯಂಸೇವಕ ಸತ್ಯಾಗ್ರಹಗಳ ಶಿಬಿರವನ್ನು ಸ್ಥಾಪಿಸಲಾಯಿತು. ಶಿವಮೂರ್ತಿ ಸ್ವಾಮಿಗಳನ್ನು ಸಿಬಿರಾಧಿಪತಿಯನ್ನಾಗಿ ನೇಮಿಸಲಾಯಿತು ಸುಮಾರು 200 ಯುವಕರನ್ನು ಸೇರಿಸಿ ಇವರಿಗೆ ಸೈನಿಕ ತರಬೇತಿಯನ್ನು ನೀಡಲಾಯಿತು. ನೇತಾಜಿ ಸುಭಾಸರ ಐಎನ್ಎ ಸೇನಾ ದಳದ ನಿವೃತ್ತ ಕ್ಯಾಪ್ಟನ್ ರಾಮಚಂದ್ರ ಸಿಂಗ್ ಅವರಿಂದ ಈ ಯುವಕರಿಗೆ ಬಂದೂಕುಗಳನ್ನು ಚಲಾಯಿಸುವ ವಿಶೇಷವಾಗಿ 303 ಗನ್ನನ್ನು ಚಲಾಯಿಸುವ ತರಬೇತಿಯನ್ನು ನೀಡಲಾಯಿತು. ಬುಷ್ ಹಂಟಿಂಗ್ ಮತ್ತು ಸೂಟ್ ಯುದ್ಧಗಳ (ಗೆರಿಲ್ಲ ಯುದ್ಧ) ತಂತ್ರಗಳ ತರಬೇತಿಯನ್ನು ನೀಡಲಾಯಿತು. ಹೀಗೆ ಅರೆ ಸೈನಿಕರು ಹೈದರಾಬಾದ್ ಪ್ರಾಂತ್ಯದೊಳಗೆ ನುಗ್ಗಿ ರಜಾಕಾರರನ್ನು ಹಲವಾರು ಸಲ ಘಾಸಿಗೊಳಿಸಿದರು. ಹಲವಾರು ಕಡೆಗಳಲ್ಲಿ ಅಸಹಾಯಕ ಹಿಂದುಗಳನ್ನು ರಕ್ಷಿಸಲಾಯಿತು ಕೊಪ್ಪಳ ಜಿಲ್ಲೆಯ ಈಗಿನ ಕುಕನೂರು ಪೊಲೀಸ್ ಠಾಣೆಯನ್ನು ಮುತ್ತಿ ಯಾವ ರಕ್ತಪಾತವಿಲ್ಲದೆ ಪೊಲೀಸರಲ್ಲಿದ್ದ ಸರ್ವ ಶಸ್ತ್ರಾಸ್ತ್ರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು ಈ ಸತ್ಯಾಗ್ರಹಗಳು. ಶ್ರೀ ಶಿವಮೂರ್ತಿ ಸ್ವಾಮಿಗಳ ಇಂತಹ ಕಾರ್ಯಾಚರಣೆ ಗಳಿಂದಾಗಿ ನಿಜಾಮ ಸರಕಾರ ನಿದ್ದೆಗೆಟ್ಟಿತ್ತು. ಹಾಗಾಗಿ ಶ್ರೀ ಶಿವಮೂರ್ತಿ ಸ್ವಾಮಿಗಳನ್ನು ಜೀವಂತ ಹಿಡಿದು ಕೊಟ್ಟವರಿಗೆ ರೂ. 20,000 ಅಥವಾ ಹೆಣವನ್ನು



ಒಪ್ಪಿಸಿದವರಿಗೆ ರೂಪಾಯಿ 10,000ಗಳ ಬಹುಮಾನವನ್ನು ನಿಜಾಮ ಸರ್ಕಾರ ಘೋಷಿಸಿತು. ಅಷ್ಟೇ ಅಲ್ಲದೆ ಸ್ವಾಮಿಗಳ ಸಿದ್ದೇಶ್ವರ ಮಠದಿಂದ ಬೆಲೆಬಾಳುವ ವಸ್ತುಗಳನ್ನು ರಜಾಕಾರರು ದೋಚಿದರು. ಅವರ ಮನೆಯ ಸಾಮಾನುಗಳನ್ನು 16 ಲಾರಿಗಳಲ್ಲಿ ಸಾಗಿಸಿದರೆ ಇಂಥ ಸೇಡಿನ ಹೀನ ಕ್ರಮಕ್ಕೂ ಕುಗ್ಗದೆ ಕಪ್ಪತ್ತಗುಡ್ಡದಲ್ಲಿ ಭೂಗತರಾಗಿ ಕಾರ್ಯಾಚರಣೆಗಳನ್ನು ಭಾರತ ಸರ್ಕಾರ ಸೈನಿಕ ಕಾರ್ಯಾಚರಣೆ ಮಾಡುವವರಿಗೆ ಮುಂದು ವರಿಸಿದರು. ರಜಾಕಾರರ ಹಾವಳಿ ಮಿತಿಮೀರಿದಾಗ ಮೀರ ಉಸ್ಮಾನ್ ಅಲಿಖಾನ್ ಕುರುಡನಂತೆ ಕಿವುಡನಂತೆ ವರ್ತಿಸಿದಾಗ ನಿಜಾಮನನ್ನು ನಂಬಿಸಿದ ಜನರಲ್ ಎಲ್ ಆಂಡ್ರಿಸ್ ಮತ್ತು ಖಾಸಿಂ ರಜ್ವ ಇವರ ಸೇನೆ ಭಾರತದ ಸೈನ್ಯದ ಮುಂದೆ ಧೂಳಿಪಟವಾಯಿತು. ಕೇವಲ ಆರು ದಿನಗಳ ಕಾಲ 1948 ಸಪ್ಟಂಬರ್ 13 ರಿಂದ 18 ರವರೆಗೆ ನಡೆದ ಸೈನಿಕ ಕಾರ್ಯಾಚರಣೆಯಲ್ಲಿ ಮುಂಡರಗಿ ಮತ್ತು ಇತರ ಶಿಬಿರಗಳಲ್ಲಿದ್ದ ಸತ್ಯಾಗ್ರಹ ಸೈನಿಕರು ಸಹಕರಿಸಿದರು. ಹೈದರಾಬಾದಿನ ವಿಮೋಚನೆ ಮುಂದೆ ಕರ್ನಾಟಕ ಏಕೀಕರಣದ ಮೊದಲ ಹೆಜ್ಜೆ. ಆದ್ದರಿಂದ ಕೊಂಚ ಹೆಚ್ಚು ಹೋರಾಡಿದ ಶಿವಮೂರ್ತಿ ಸ್ವಾಮಿಗಳ ಅಂತರಂಗದಲ್ಲಿ ಅಖಂಡ ಕರ್ನಾಟಕದ ಕನಸು ಬೀಜ ರೂಪದಲ್ಲಿತ್ತು.

ಹೀಗೆ ತಮ್ಮ ತನು, ಮನ ಧನದಿಂದ ಹೋರಾಡಿದ ಧೀಮಂತ ನಾಯಕರು ನಮ್ಮೂರಿನ ಶ್ರೀ ಶಿವಮೂರ್ತಿ ಸ್ವಾಮಿಗಳು. ಹೀಗೆ ಜನಮನದಲ್ಲಿ ಪೂಜ್ಯನೀಯ ಸ್ಥಾನ ಪಡೆದು. ಸಾಮಾಜಿಕ. ಧಾರ್ಮಿಕ. ಶೈಕ್ಷಣಿಕ ರಾಜಕೀಯ. ಕ್ಷೇತ್ರದಲ್ಲಿ. ಸೇವೆಗೈದವರು. ಕರ್ನಾಟಕ ಏಕೀಕರಣ ಪ್ರಶಸ್ತಿ ಮುಡಿಗೇರಿಸಿಕೊಂಡವರು. ಹಿರಿಯರ ಬದುಕು ಕಿರಿಯರ ಬಾಳಿಗೆ ಬೆಳಕಾಗಿದೆ. 'ಕರ್ನಾಟಕದ ಹುಲಿ 'ಎಂದೇ ಖ್ಯಾತಿ ಹೊಂದಿರುವ ಶ್ರೀ ಗಳ ಹೋರಾಟದ ಬದುಕು ಇತಿಹಾಸದ ಪುಟ ಸೇರಿದೆ. ಅವರೆಂದೆಂದಿಗೂ ಅಜರಾಮರರು.

## ಟಿಬಿ ಡ್ಯಾಂನ ರಾಷ್ಟ್ರೀಯ ಹೆದ್ದಾರಿಯಿಂದ ಭುವನಹಳ್ಳಿವರೆಗೆ 40 ಕಿ.ಮೀ. ಮಾನವ ಸರಪಳಿ

# ಬಲಿಷ್ಠ ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸಿದ ವಿಜಯನಗರ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಜನರು ನಮ್ಮ ಹೆಮ್ಮೆಯ ಪ್ರಜಾಪ್ರಭುತ್ವ ಬಲಪಡಿಸುವುದಕ್ಕೆ ಕೈ ಜೋಡಿಸಿದರು. ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಯ ಘೋಷ ಹಾಕಿ ಸಂಭ್ರಮಿಸಿದರು.

ಹೌದು..! ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮವು ಹೊಸ ಇತಿಹಾಸ ಸೃಷ್ಟಿಸಿತು. ಪೂರ್ವನಿಗದಿಯಂತೆ ಬೆಳಗಿನ ಅವಧಿಯಲ್ಲಿ ಮಾನವ ಸರಪಳಿ ಕಾರ್ಯವು ಮಾರ್ಗದುದ್ದಕ್ಕೂ ಯಶಸ್ವಿಯಾಗಿ ನೆರವೇರಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ತಂಡೋಪತಂಡವಾಗಿ ಆಗಮಿಸಿ ಪ್ರಜಾಪ್ರಭುತ್ವ ದಿನದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗಿಯಾದರು. ಪ್ರಜಾಪ್ರಭುತ್ವ ವ್ಯವಸ್ಥೆ ಬಲಪಡಿಸುವ ಕಾರ್ಯಕ್ರಮಕ್ಕೆ ಕೈಜೋಡಿಸಿದರು.

ವಿಜಯನಗರ–ಕೊಪ್ಪಳ ಗಡಿಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಟಿ.ಬಿ.ಡ್ಯಾಮ್ ಮೊದಲನೇ ಸೇತುವೆ ಯಿಂದ ಭುವನಹಳ್ಳಿವರೆಗೆ ಸುಮಾರು 40 ಕಿ.ಮೀ ಉದ್ದ ಮಾನವ ಸರಪಳಿಯನ್ನು ನಿರ್ಮಿಸಿ ವಿಜಯನಗರ ಜಿಲ್ಲೆಯ ಜನರು ಹೊಸ ಇತಿಹಾಸ ಬರೆದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿ ಕಾರಿಗಳು ನಿರಂತರ ಸಭೆ ನಡೆಸಿ ಅಧಿಕಾರಿಗಳ ತಂಡ ರಚಿಸಿ ಅಚ್ಚುಕಟ್ಟಾಗಿ ಆಯೋಜನೆ ಮಾಡಿದ್ದ ಐತಿಹಾಸಿಕ ಮಾನವ ಸರಪಳಿಯಲ್ಲಿ ಜಿಲ್ಲೆಯ ಜನ ಪ್ರತಿನಿಧಿಗಳು, ಗಣ್ಯರು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಎಲ್ಲಾ ಸಂಘ



ಸಂಸ್ಥೆಗಳು ಪ್ರತಿನಿಧಿಗಳು, ಕಾರ್ಮಿಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

**ಸಂವಿಧಾನ ಪೀಠಿಕೆ ವಾಚನ:** ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಪೀಠಿಕೆಯ ವಾಚನ ಕಾರ್ಯಕ್ರಮಕ್ಕೆ ಡಾ.ಬಿ. ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ, ಸಸಿಗೆ ನೀರು ಹಾಕುವ ಮೂಲಕ ಶಾಸಕ ಹೆಚ್.ಆರ್.ಗವಿಯಪ್ಪ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕರು, ಜನಾಡಳಿತ ಜಾರಿಗೊಳಿಸಿದ ಪ್ರಜಾಪ್ರಭುತ್ವವು ಅತ್ಯಂತ ದೊಡ್ಡ ಶಕ್ತಿಯಾಗಿದೆ. ಎಲ್ಲರಿಗೂ ಸಮಾನವಾಗಿ ಬದುಕುವ ಸ್ವಾತಂತ್ರ್ಯದ ಹಕ್ಕನ್ನು ಸಂವಿಧಾನ ನೀಡಿದೆ. ನಮಗೆ ಬೇಕಾದ ಮುಖ್ಯಮಂತ್ರಿಗಳು, ಶಾಸಕರು, ಸಂಸದರು ಸೇರಿದಂತೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಮಹತ್ವದ ಮತದಾನದ ಹಕ್ಕು ಸಂವಿಧಾನ, ಪ್ರಜಾಪ್ರಭುತ್ವದ ಮೂಲಕ ನಮಗೆ ದಕ್ಕಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಬ್ರಿಟೀಷ್‌ರ ಹಾಗೂ ರಾಜರ ಆಡಳಿತವಿತ್ತು. ಆದರೆ ಜನರ ಆಡಳಿತವಿರಲಿಲ್ಲ. ಪ್ರಜಾಪ್ರಭುತ್ವದಿಂದಲೇ ನಮಗೆ ಜನಾಡಳಿತ ಸಾಧ್ಯವಾಗಿದೆ. ಸಂವಿಧಾನದಿಂದಾಗಿ ನಮಗೆ ಮಹತ್ವದ ಹಕ್ಕುಗಳು ದೊರೆತಿವೆ. ನಮ್ಮ ಹಕ್ಕಗಳನ್ನು ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ ಅವುಗಳನ್ನು ಉಳಿಸಿಕೊಳ್ಳಬೇಕು. ಪ್ರಜಾಪ್ರಭುತ್ವವು ಅತ್ಯಂತ ದೊಡ್ಡ ಶಕ್ತಿಯಾಗಿದ್ದು, ಅದನ್ನು ಯಾರು ಬಿಟ್ಟುಕೊಡಬಾರದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಸಾರ್ವಜನಿಕರಿಗೆ ವಿಶೇಷವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ರಾಜ್ಯ ಸರ್ಕಾರವು ಬೀದರ್ ಜಿಲ್ಲೆಯ ಬಸವಕಲ್ಯಾಣದಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ಕಾರ್ಯಕ್ರಮ ರೂಪಿಸಿದೆ. 2500 ಕಿ.ಮೀ ಉದ್ದದ ಬೃಹತ್ ಮಾನವ ಸರಪಳಿ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ ಸಹ ಸಾವಿರಾರು ಸಂಖ್ಯೆಯಲ್ಲಿ ಜನರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ ಮಾತನಾಡಿ, ದಾರಿಯುದ್ದಕ್ಕೂ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಮಾನವ ಸರಪಳಿ ಸಾಲಿನಲಿ ನಿಂತಿರುವುದನ್ನು ಕಂಡು ಸಂತಸವಾಯಿತು. ಇದು ಸ್ಫೂರ್ತಿದಾಯಕ ಕಾರ್ಯಕ್ರಮ. ನಮ್ಮ ಸಂವಿಧಾನ, ನಮ್ಮ ಹಕ್ಕು, ನಮ್ಮ ಪ್ರಜಾಪ್ರಭುತ್ವ ಎಂಬ ಭಾವನೆ ಎಲ್ಲರಲ್ಲಿಯೂ ಮೂಡಬೇಕು. ಎಲ್ಲರು ಸಮಾನರಾಗಿ ಬಾಳಬೇಕು ಎನ್ನುವಂತಹ ಸಂದೇಶ ನೀಡಿದ ಸಂವಿಧಾನದ ನಿರ್ಮಾತೃ ಡಾ ಬಿ.ಆರ್.ಅಂಬೇಡ್ಕರ್ ಅವರನ್ನು ನಾವೆಲ್ಲರೂ ಈ ಹೊತ್ತು ಸ್ಮರಿಸೋಣ ಎಂದು ತಿಳಿಸಿದರು.

ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್ ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ಹುಡಾ ಅಧ್ಯಕ್ಷ ಎಚ್.ಎನ್.ಎಫ್ ಮಹಮದ್ ಇಮಾಮ್ ನಿಯಾಜಿ, ಜಿಪಂ ಸಿಇಒ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಹಲವು ಗಣ್ಯರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ಗಮನ ಸೆಳೆದ ಗಾಂಧಿ, ಅಂಬೇಡ್ಕರ್ ವೇಷಧಾರಿ ಮಕ್ಕಳು:** ಕಾರ್ಯಕ್ರಮದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹಾಗೂ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ ಬಿ.ಆರ್.ಅಂಬೇಡ್ಕರ್ ಅವರ ವೇಷ ಧರಿಸಿದ ಮಕ್ಕಳು ಎಲ್ಲರ ಗಮನ ಸೆಳೆದರು.

ಹೊಸಪೇಟೆ ನಗರದ ಡಾ ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನಂದಿ ಕೋಲು, ಹಗಲು ವೇಷ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳು ಪಾಲ್ಗೊಂಡು ಹಬ್ಬದ ವಾತಾವರಣ ಸೃಷ್ಟಿಸಿದ್ದವು. ಸಂವಿಧಾನದ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಮತ್ತಿತರರು ಭಾಗಿಯಾಗಿದ್ದರು.

10% BETTER EFFICIENCY · EASY TO OPERATE · LOW SERVICE COST · LIGHTER · 0 TO 50° C · SERVICE EFFICIENCY · EXTENDED SERVICE INTERVALS · HEAVY DUTY AIR FILTER · HIGH RESELL VALUE



Grow Your Business With Us

S.M.Traders & Services

Atlas Copco

9686663125 - 9686663132 - 9686413132


> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**17–09–2024 – ಮಂಗಳವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶತಭಿಷ |
| ಯೋಗ | : ಧೃತಿ |
| ಕರಣ | : ಶೂಲ |
| ಸೂರ್ಯೋದಯ | : 06:15:14 |
| ಸೂರ್ಯಾಸ್ತ | : 18:26:57 |
| ರಾಹು ಕಾಲ | : 15:24–16:56 |
| ಯಮಘಂಡ ಕಾಲ | : 09:18–10:50 |
| ಗುಳಿಕ ಕಾಲ | : 12:21–13:53 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 16–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632 ಅಡಿ |
| ಒಳ ಹರಿವು | 18737 ಕ್ಯುಸೆಕ್ |
| ಹೊರ ಹರಿವು | 18137 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1621.49 ಅಡಿ |
| ಒಳ ಹರಿವು | 1732 ಕ್ಯುಸೆಕ್ |
| ಹೊರ ಹರಿವು | 9925 ಕ್ಯುಸೆಕ್ |
| ಸಾಮರ್ಥ್ಯ | 65.610 ಟಿಎಂಸಿ |


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
Follow for vijayanagara dist. updates

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089


# ಗಣೇಶನ ಕಾಣಿಕೆಯಲ್ಲಿ ರಸ್ತೆ ಸರಿಪಡಿಸಿದ ಯುವಕರು

## ಕಿನ್ನಾಳ ಗ್ರಾಮದ ಯುವಕರ ಕಾರ್ಯಕ್ಕೆ ಜಿಲ್ಲಾ ನ್ಯಾಯಾಧೀಶರ ಮೆಚ್ಚುಗೆ

■ **ಹಂಪಿ ಟೈಮ್ಸ್ ಕೊಪ್ಪಳ**

ಗಣೇಶ ಉತ್ಸವ–2024ರ ಸಮಯದಲ್ಲಿ ಸಂಗ್ರಹಿಸಿದ ಹಣದಿಂದ ತಮ್ಮೂರ ರಸ್ತೆಯನ್ನು ಸರಿಪಡಿಸಿದ ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮದ ಯುವಕರ ನಡೆಗೆ ಗೌರವಾನ್ವಿತ ಕೊಪ್ಪಳ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಶೇಖರ್ ಸಿ ಅವರು ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗಣೇಶ ಉತ್ಸವದ ಸಮಯದಲ್ಲಿ ಹಣ ಸಂಗ್ರಹಿಸಿದ ಯುವಕರು ಗಣೇಶ ಉತ್ಸವಕ್ಕೆ ಕಡಿಮೆ ಪ್ರಮಾಣದಲ್ಲಿ ಹಣ ಬಳಸಿ ಉಳಿದ ಹಣವನ್ನು ರಸ್ತೆಗೆ ಬಳಸಿದ ಬಗ್ಗೆ ಪತ್ರಿಕೆಗಳಲ್ಲಿ ವಿಶೇಷ ವರದಿಯಾಗಿತ್ತು. ಇದನ್ನು ಗಮನಿಸಿದ ನ್ಯಾಯಾಧೀಶರಾದ ಚಂದ್ರಶೇಖರ್ ಸಿ ಅವರು, ಇನ್ನಿತರ ನ್ಯಾಯಾಧೀಶರು ಹಾಗೂ ಕೋರ್ಟ್ ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ ಸೆ.14ರಂದು ಚಹಾ ಕೂಟ ಏರ್ಪಡಿಸಿ ಯುವಕರಿಗೆ ಅಭಿನಂದನೆ ತಿಳಿಸಿದರು.

**ನಿಮ್ಮ ಕಾಳಜಿ ಇತರರಿಗೆ ಮಾದರಿ:** ಇಂದಿನ ಬಹುತೇಕ ಯುವಕರು ಹಲವಾರು ವ್ಯಸನಗಳಿಗೆ ಬಲಿಯಾಗಿ ಜೀವ





ಕಳೆದುಕೊಳ್ಳುತ್ತಿದ್ದಾರೆ. ಓದು, ಅಧ್ಯಯನ ಕಡಿಮೆ ಆಗಿದೆ. ಬಹಳಷ್ಟು ಯುವಕರು ಯಾವುದೇ ಆದರ್ಶ, ಮೌಲ್ಯಗಳನ್ನು ಇಟ್ಟುಕೊಳ್ಳದೇ ದಿನಗಳೆಯುತ್ತಾರೆ. ನಾವು ಸರಿ ಇದ್ರೆ ಸಾಕು. ಊರ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ಳಬೇಕು ಎಂದೇ ಬಹಳಷ್ಟು ಜನ ಆಲೋಚಿಸು ತ್ತಾರೆ. ಇಂತಹ ಸಂದರ್ಭದಲ್ಲಿ ನೀವು ಗ್ರಾಮದ ಬಗ್ಗೆ ವಿಶೇಷ ಕಾಳಜಿ ವಹಿಸಿ, ನಮ್ಮ ಗ್ರಾಮಕ್ಕೆ ಸುಸಜ್ಜಿತ ರಸ್ತೆಯಾದಲ್ಲಿ ಅನುಕೂಲವಾಗಲಿದೆ ಎಂದು ಯೋಚಿಸಿ, ಉತ್ತಮ ಯೋಚನೆ, ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿ ಗಣೇಶ ಉತ್ಸವಕ್ಕೆ ಸಂಗ್ರಹಿಸಿದ ಹಣದಿಂದ ಗ್ರಾಮದ ರಸ್ತೆ ಮಾಡಿದ ಕಾರ್ಯವು ಅತ್ಯಂತ ಮಾದರಿಯಾದುದಾಗಿದೆ. ನಿಮ್ಮ ಕಾರ್ಯವು ಶ್ಲಾಘನೀಯವಾಗಿದೆ. ನಿಮ್ಮ ಕಾರ್ಯವು ಜಿಲ್ಲೆಯ ಇನ್ನಿತರ ಗ್ರಾಮಗಳ, ರಾಜ್ಯದ, ದೇಶದ ಯುವಕರಿಗೆ ಮಾದರಿಯಾಗಿದೆ ಎಂದು ನ್ಯಾ. ಚಂದ್ರಶೇಖರ ಸಿ ಅವರು ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮದ ಯುವಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಯುವಕರಿಂದ ಅಭಿನಂದನೆ:** ನಮ್ಮ ಕಾರ್ಯದ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಸುದ್ದಿ ವಾಹಿನಿಗಳಲ್ಲಿ ಸುದ್ದಿಯಾದಾಗ ನಮಗೆ ಸಾಕಷ್ಟು ಖುಷಿಯಾಯಿತು. ಯುವಜನರು ಒಗ್ಗೂಡಿದಲ್ಲಿ ಇಂತಹ ಹತ್ತಾರು ಕಾರ್ಯಗಳನ್ನು ಮಾಡಬಹುದಾಗಿದೆ ಎನ್ನುವಂತಹ ಪ್ರೇರಣೆ ನಮಗೆ ಸಿಕ್ಕಿದೆ. ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರು ನಮ್ಮ ಕಾರ್ಯವನ್ನು ಗುರುತಿಸಿ, ಖುದ್ದು ಜಿಲ್ಲಾ ನ್ಯಾಯಾಲಯಕ್ಕೆ ಆಹ್ವಾನ ನೀಡಿ ನ್ಯಾಯಾಧೀಶರ ಸಮ್ಮುಖದಲ್ಲಿ ಕೂಡಿಸಿ ನಮಗೆ ಆತಿಥ್ಯ ಮಾಡಿದ್ದು, ಮತ್ತಷ್ಟು ಹೊಸ ಹೊಸ ಕಾರ್ಯ ಮಾಡಲು ನಮಗೆ ವಿಶೇಷ ಸ್ಫೂರ್ತಿ ಸಿಕ್ಕಂತಾಗಿದೆ ಎಂದು ಯುವಕರು, ಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರಾದ ಚಂದ್ರಶೇಖರ ಸಿ ಅವರಿಗೆ ಅಭಿನಂದನೆ ತಿಳಿಸಿದರು.

# ಮನೆ ಬಾಗಿಲಿಗೆ ಜೋಕುಮಾರಸ್ವಾಮಿ



**ಮೊದಲ ಪುಟದಿಂದ**

ಎಣ್ಣೆ ಮತ್ತು ಮಣ್ಣಿನಿಂದ ತಯಾರಿಸಲಾದ ಜೋಕುಮಾರ ಸ್ವಾಮಿಯನ್ನು ಬುಟ್ಟಿಯಲ್ಲಿರಿಸಿ ಬೇವಿನ ಎಲೆ, ಬೆಣ್ಣೆ, ದಾಸವಾಳ, ಮಲ್ಲಿಗೆ ಸೇರಿದಂತೆ ವಿವಿಧ ಪುಷ್ಪಗಳಿಂದ ವಿಶೇಷವಾಗಿ ಅಲಂಕರಿಸಿ, ಈತನ ವೀರತನಕ್ಕೆ ಸಾಕ್ಷಿಯಾಗಿ,ಹಣೆಗೆ ಕುಂಕುಮ ಕೈಯಲ್ಲಿ ಖಡ್ಗ ಇರಿಸಿ ಜೋಕುಮಾರ ಸ್ವಾಮಿಯನ್ನು ಹೊತ್ತು ತರಲಾಗಿತ್ತು.

ಬುಟ್ಟಿಯಲ್ಲಿ ಹೊತ್ತು ತಂದ ಜೋಕುಮಾರ ಸ್ವಾಮಿಗೆ ಮನೆಯ ಮಹಿಳೆಯರು ಪೂಜಿಸಿ,ತೆಂಗಿನಕಾಯಿ ,ಹಣ್ಣು ನೈವೇದ್ಯ ಮಾಡಿ, ಜೋಳ, ರಾಗಿ,,ಹತ್ತಿ,ಒಣ ಮೆಣಸಿನಕಾಯಿ ಸೇರಿದಂತೆ ಬೆಳೆದ ದವಸ ಧಾನ್ಯಗಳನ್ನು ಅರ್ಪಿಸಿ ಸ್ವಾಮಿಗೆ ಭಕ್ತಿಯಿಂದ ನಮಸ್ಕರಿಸಿದರು. ಇದಕ್ಕೆ ಪ್ರತಿಯಾಗಿ ಜೋಕುಮಾರ ಸ್ವಾಮಿಯ ಬುಟ್ಟಿಯಲ್ಲಿದ್ದ ಕರಿಮಸಿ ಬೆರೆತ ಬೇವಿನ ಸೊಪ್ಪು ಸೇರಿದಂತೆ ಇತ್ಯಾದಿಗಳನ್ನು ತಮ್ಮ ಹೊಲದಲ್ಲಿನ ಬೆಳೆಗಳೆಗಳು ಸಮೃದ್ಧವಾಗಿ ಬರಲೆಂದು ಹಾರೈಸಿ ಅಂಬಲಿಯೊಂದಿಗೆ ಬೆರಸಿಕೊಂಡು ಚೆರಗ ಚಲ್ಲಲು ಕೊಟ್ಟರು.

# ಪ್ರತ್ಯೇಕ ಸಚಿವಾಲಯ ರಚನೆ ಚರ್ಚೆ

**ಮೊದಲ ಪುಟದಿಂದ**

ಕಾಂಗ್ರೆಸ್ ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯ ಪರವಾಗಿದೆ ಎಂದರು.

**371 ಜೆ ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ:** ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರದ ಅವಧಿಯಲ್ಲಿ 371ಜೆ ಕಾನೂನು ತರಲಾಗಿದ್ದು, ಇದಕ್ಕಾಗಿ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿಮುಖ್ಯಮಂತ್ರಿ ಧರಂಸಿಂಗ್ ಅವರು ಶ್ರಮವಹಿಸಿದ್ದರು ಎಂದರು.

**ಕಲ್ಯಾಣ ಕರ್ನಾಟಕಕ್ಕೆ 5000 ಕೋಟಿ ಅನುದಾನ:** ಕಾಂಗ್ರೆಸ್ ಸರ್ಕಾರದ ಮೇಲೆ ಕಲ್ಯಾಣ ಕರ್ನಾಟಕ ಭಾಗದ ಜನರ ನಿರೀಕ್ಷೆಯಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಬಡವರ ಪರವಾದ ಸರ್ಕಾರ ನಮ್ಮದು. ಆದ್ದರಿಂದ ಈ ಭಾಗದ ಅಭಿವೃದ್ಧಿಗಾಗಿ 5000 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದರು.

# ಈದ್–ಮಿಲಾದ್ ಸಂಭ್ರಮ

**ಮೊದಲ ಪುಟದಿಂದ**

ನಗರದಲ್ಲಿ ಈದ್ಗಾ ಮೈದಾನದಿಂದ ಮಹತ್ಮಗಾಂಧಿ ವೃತ್ತದವರೆಗೆ ಕಾಲ್ನಡಿಗೆ ಮೆರವಣಿಗೆ ಸಾಗಿ, ನಂತರ ಮೀರಾಲಾಂ ಟಾಕೀಸ್ ಬಳಿ ನಡೆದ ಧಾರ್ಮಿಕ ಸಭೆಯಲ್ಲಿ ಸೋಮವಾರ ಮಾತನಾಡಿದರು. ಇಂದು ಮುಸ್ಲಿಂ ಬಾಂಧವರು ವಿಶ್ವಾದಾದ್ಯಂತ ಈದ್–ಈ–ಮಿಲಾದ್–ಉನ್–ನಬಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಈ ದಿನವು ಮುಸ್ಲಿಂ ಸಮುದಾಯದವರಿಗೆ ಮಹತ್ವಪೂರ್ಣ ದಿನವಾಗಿದೆ. ಮುಹಮ್ಮದ್‌ರ ಜನ್ಮದಿನದ ವಿಶೇಷ ಸಂದರ್ಭದಲ್ಲಿ ಮೆರವಣಿಗೆಗಳನ್ನು ಕೈಗೊಳ್ಳಲಾಗುತ್ತದೆ. ಅದೇ ರೀತಿ ಹೊಸಪೇಟೆಯಲ್ಲಿ ಈದ್ ಮಿಲಾದ್ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಮೆರವಣಿಗೆ ನಡೆಸಲಾಗಿದೆ ಎಂದರು.

ನಗರದಲ್ಲಿ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಂಭ್ರಮ, ಸಡಗರದಿಂದ ಸೋಮವಾರ ಆಚರಿಸಿ, ಪರಸ್ಪರ ಶುಭಕೋರಿದರು. ಈ ಮೆರವಣಿಗೆಯಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಭಾಗವಹಿಸಿದ್ದರು. ವಕ್ಫ್ ಸಮಿತಿಯ ಜಿಲ್ಲಾ ಅಧ್ಯಕ್ಷ ದಾದಾಪೀರ್ ಭಾವ್, ಂಜುಮನ್ ಸಂಸ್ಥೆಯ ಉಪಾಧ್ಯಕ್ಷ ಎಮ್ ಫಿರೋಜ್ ಖಾನ್, ಕಾರ್ಯದರ್ಶಿ ಎಮ್.ಡಿ.ಅಬೂಬಕ್ಕರ್, ಖಾಜಾಂಚಿ ಜಿ.ಅನ್ಸರ್ ಭಾಷ, ಸಹಕಾರ್ಯದರ್ಶಿ ಡಾ. ಎಮ್.ಡಿ.ದುರ್ವೇಶ್ ಮೈನುದ್ದಿನ್ ಹಾಗು ಸದ್ಯಸರಾದ ಕೋತ್ವಾಲ್ ಮೊಹಮ್ಮದ್ ಮೋಸಿನ್ ಅಡ್ವಕೇಟ್ ಸದ್ದಾಮ್ ಮತ್ತು ಎಲ್ ಗುಲಾಮ್ ರಸೂಲ್, ಬಡಾವಲಿ ಹಾಗು ಸಮಾಜದ ಹಿರಿಯ ಮುಖಂಡರುಗಳು ಯುವಕರು, ಮಕ್ಕಳು ಭಾಗವಹಿಸಿದ್ದರು


14 ಭಾಷೆಗಳಲ್ಲಿ ಸುದ್ದಿ
ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗಾಗಿ ಭೇಟಿ ನೀಡಿ
www.hampitimes.com


## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi · ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ವಿಷಯ : ಕನ್ನಡ(ಪ್ರ.ಭಾ) ಭಾಗ್ಯಶಿಲ್ಪಿಗಳು (ಗದ್ಯ) (ಮುಂದುವರೆದ ಭಾಗ)

**ಈ) ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು? ಅಥವಾ ಮೈಸೂರು ಸಂಸ್ಥಾನ 'ಮಾದರಿ ಮೈಸೂರು ರಾಜ್ಯ'ಎಂಬ ಕೀರ್ತಿಗೆ ಪಾತ್ರವಾಗುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಾತ್ರವೇನು ವಿವರಿಸಿ. (ಜೂನ್–2019 ಆಗಸ್ಟ್–2024)**

ಉತ್ತರ– ಕ್ರಿ.ಶ.1902 ರಿಂದ ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಇವರು ಕ್ರಿಸ್ತಶಕ 1907 ರಲ್ಲಿ 'ನ್ಯಾಯ ವಿಧಾಯಕ ಸಭೆ'ಯನ್ನು ಸ್ಥಾಪಿಸಿದರು. ಇದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿತ್ತು. ಕ್ರಿ.ಶ.1923 ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆ ಯನ್ನಾಗಿ ಮಾರ್ಪಡಿಸಿದರು ಇವರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರಿಕರಣಕ್ಕೆ ಅನುವು ಮಾಡಿಕೊಟ್ಟರು. ಇವರ ಕಾಲದಲ್ಲಿ ಗ್ರಾಮ ನೈರ್ಮಲ್ಲಿಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರ ಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಬಿರುದಿಗೆ ಪಾತ್ರರಾದ ಇವರು ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಎಂಬ ಸಂಸ್ಥೆ ಪ್ರಾರಂಭಗೊಳ್ಳಲು ಕಾರಣಿಕರ್ತರಾದರು. ಮೈಸೂರು ರಾಜ್ಯದಲ್ಲಿ ರೈಲು ಮಾರ್ಗಗಳ ನಿರ್ಮಾಣ ಕಾರ್ಯವು ಭರದಿಂದ ಸಾಗಿತು. ಕ್ರಿ.ಶ.1900 ರಲ್ಲಿ ಶಿವನಸಮುದ್ರದ ಬಳಿಯ ಕಾವೇರಿ ಕಣಿವೆಯಲ್ಲಿ ಏಷ್ಯಾದ ಮೊಟ್ಟ ಮೊದಲ ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭ ಮಾಡಿದರು. ವಾಣಿ ವಿಲಾಸ ಸಾಗರ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಮಾಡಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ಮೈಸೂರು ರಾಜ್ಯವಾಗಿ ಮಾರ್ಪಾಡಾಯಿತು.

**2. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ? (ಮಾರ್ಚ್–2019)**

ಉತ್ತರ– ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದ ನಂತರ ಆಡಳಿತದಲ್ಲಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ವಿಶ್ವೇಶ್ವರಯ್ಯ ಅವರು 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದು ಸಂಸ್ಥಾನವೇ ಪ್ರತ್ಯೇಕ ಪ್ರೌಢ ಶಿಕ್ಷಣ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾಲಯದ ಜೊತೆಗೆ ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಹಾಗೂ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ವಿಶ್ವೇಶ್ವರಯ್ಯನವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಕ್ಕರೆ, ಗಂಧದ ಎಣ್ಣೆ, ಕಾಗದ ಕಾರ್ಖಾನೆ ಹೀಗೆ ನೂರಾರು ಕೈಗಾರಿಕೆಗಳನ್ನು ಆರಂಭಿಸಿದರು. 1913 ರಲ್ಲಿ ಮೈಸೂರು ಬ್ಯಾಂಕ್ ನಂತರ ಉಳಿತಾಯ ಬ್ಯಾಂಕ್, ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿ, ಸಾರ್ವಜನಿಕ ಜೀವಾ ಯೋಜನೆ, ಪ್ರಾಂತೀಯ ಸರ್ಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದರು. ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ಮಾರಿಕಣಿವೆ ಜಲಾಶಯದ ನಿರ್ಮಾಣ, ನೀರು ಹಂಚಿಕೆಯ ಪುನರ್ ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ ಹೀಗೆ ಅನೇಕ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯಗತಗೊಳಿಸಿದರು.

**3. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ. (ಮಾರ್ಚ್–2018, ಆಗಸ್ಟ್ –2024)**

ಉತ್ತರ– ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ ಎಂದು ನಂಬಿದರು. 1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢ ಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢ ಶಿಕ್ಷಣ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ ಇವರ ದೂರ ದೃಷ್ಟಿಯ ಮತ್ತೊಂದು ಫಲ ಶೃತಿ. 'ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆ ಜನ್ಮ ಸಿದ್ಧ ಹಕ್ಕಾಗಬೇಕು' ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ ಇವರು ಗೃಹ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.

**4. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಲಾದ ಪ್ರಜಾ ಪ್ರತಿನಿಧಿ ಸಭೆ ಹಾಗೂ ನ್ಯಾಯ ವಿಧಾಯಕ ಸಭೆಯನ್ನು ಕುರಿತು ಬರೆಯಿರಿ .(ಮಾರ್ಚ್–2019)**

ಉತ್ತರ– ಮಾದರಿ ಮೈಸೂರು ಸಂಸ್ಥಾನದ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರು ಸಹ ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ನೂತನ ರೂಪವನ್ನು ಪಡೆದು ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು ಅದಕ್ಕಾಗಿ 1923ರಲ್ಲಿ ಹೊಸ ಕಾನೂನನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆ ಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಆರಂಭಿಸಿತು. ಪ್ರಜಾಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ (1 ಜೂನ್ ಮಹಾರಾಜರ ವರ್ಧಂತಿ, 2 ಅಕ್ಟೋಬರ್– ದಸರಾ ಮಹೋತ್ಸವ) ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ತಿಗಳು ನಡೆಯುತ್ತಿದ್ದವು. ಪ್ರಜಾಪ್ರತಿನಿಧಿ ಸಭೆಯಲ್ಲಿದ್ದ 275 ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು ಒಡೆಯರು 1907ರಲ್ಲಿ ನ್ಯಾಯ ವಿದಾಯಕ ಸಭೆಯನ್ನು ಸಹ ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು ಮೇಲ್ಮನೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಸಂಸ್ಥೆ ಜೂನ್ ಮತ್ತು ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ಸಹ ವಿಮರ್ಶಿಸುವ ಅಧಿಕಾರ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹಾಯ ಇದ್ದಿತು.

**5. ವಿಶ್ವೇಶ್ವರಯ್ಯ ಅವರು ಇಂಜಿನಿಯರ್ ಆಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ. (ಜೂನ್–2019)**

ಉತ್ತರ– ಪುನಾದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮೋ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಕ್ಕೂ ಪಾತ್ರರಾದ ಸರ್ ಎಂ.ವಿಶ್ವೇಶ್ವರಯ್ಯನವರು 1884ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು. ಖಾನ್ ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಗು ಮೇಲ್ಗಾಲ್ವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ವಿಯಾಗಿ ಮೇಲಾಧಿಕಾರಿಗಳ ಮೆಚ್ಚುಗೆ ಪಾತ್ರರಾದರು. ಸಿಂಧು ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು. ಪುನಾದ ಮುಥಾ ಕಾಲುವೆಗೆ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂ ಚಾಲಿತ ಬಾಗಿಲುಗಳನ್ನು ಅಳವಡಿಸಿದ್ದರು. ಸ್ವಯಂ ಚಾಲಿತ ಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಮುಂದೆ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತದ ಸ್ಯಾನಿಟರಿ ಇಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಾಣ ಮಾಡುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತಗಳ ನಗರಗಳ ಪಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು. ಮುಂದೆ ವಿಶ್ವೇಶ್ವರಯ್ಯನವರು 30 ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಇಂಜಿನಿಯರಾಗಿ ಕಾರ್ಯ ನಿರ್ವಹಿಸಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು, ರೈಲು ಮಾರ್ಗಗಳ ವಿಸ್ತರಣೆ, ಮಾರಿಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ ಇವೆಲ್ಲವೂ ವಿಶ್ವೇಶ್ವರಯ್ಯನವರು ಮಾಡಿದ ಅಭಿವೃದ್ಧಿ ಕಾರ್ಯಗಳ ಕುರುಹುಗಳಾಗಿವೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055